ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

ಬೆಲೆ: ರೂ.25

# ಸಹಕಾರ

ಮಾಸಪತ್ರಿಕೆ

ಸಂಪುಟ : 4 । ಸಂಚಿಕೆ : 10 । ಅಕ್ಟೋಬರ್ - 2022 । ಪುಟಗಳು : 20 ।

ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ





ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ಅಧ್ಯಕ್ಷರು



ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ಉಪಾಧ್ಯಕ್ಷರು

## ಸಹಕಾರಿ ಬಂಧುಗಳಿಗೆ

## ನಾಡಹಬ್ಬ ದಸರಾ ಹಾಗೂ ದೀಪಾವಳಿಯ ಹಾರ್ದಿಕ ಶುಭಾಶಯಗಳು

ಆಡಳಿತ ಮಂಡಳಿ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ, ಬೆಂಗಳೂರು



ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ: ವಾರ್ಷಿಕ ಮಹಾಸಭೆ



ಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ನಿರ್ದೇಶಕರಾದ ಶ್ರೀ ಜಿ.ಮಲ್ಲಿಕಾರ್ಜುನಯ್ಯರವರು ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಮಹಾಮಂಡಳ ನಿ., ಬೆಂಗಳೂರು, ಇದರ ನಿರ್ದೇಶಕರಾಗಿ ಆಯ್ಕೆಯಾಗಿದ್ದು ಅವರನ್ನು ಆಡಳಿತಮಂಡಳಿವತಿಯಿಂದ ಸನ್ಮಾನಿಸಲಾಯಿತು.



ಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಕೆ.ಕೆ.ಮಹೇಂದ್ರಪ್ರಸಾದ್ ಗೌಡರವರು ಕರ್ನಾಟಕ ರಾಜ್ಯ ಸಹಕಾರ ಸಂಘಗಳ ನಿಬಂಧಕರಾಗಿ ಅಧಿಕಾರ ಸ್ವೀಕರಿಸಿರುವ ಹಿರಿಯ ಐಎಎಸ್ ಅಧಿಕಾರಿ ಕ್ಯಾಪ್ಟನ್ ಕೆ. ರಾಜೇಂದ್ರರವರನ್ನು ಭೇಟಿ ಮಾಡಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಪತ್ತಿನ ಮಹಾಮಂಡಳದ ಕಾರ್ಯಚಟುವಟಿಕೆಗಳು, ಅಂಕಿಅಂಶಗಳು, ಆಡಳಿತ ಕಚೇರಿ ಕಟ್ಟಡ ನಿರ್ಮಾಣದ ಕಾಮಗಾರಿಗಳ ಬಗ್ಗೆ ನಿಬಂಧಕರಿಗೆ ಮಾಹಿತಿ ನೀಡಿದರು.

# ಶಿರಾ ಶ್ರೀ ಕನಕ ಪತ್ತಿನ ಸಹಕಾರ ಸಂಘದ ವಾರ್ಷಿಕ ಮಹಾಸಭೆ 1.76 ಕೋಟಿ ರೂ. ನಿವ್ವಳ ಲಾಭ




**ಶಿರಾ :** ಪಟ್ಟಣದ ಶ್ರೀ ಕನಕ ಪತ್ತಿನ ಸಹಕಾರ ಸಂಘವು 7 ಶಾಖೆಗಳನ್ನು ಹೊಂದುವ ಮೂಲಕ ನಿರಂತರವಾಗಿ ಲಾಭ ಗಳಿಕೆಯತ್ತ ಸಾಗಿದೆ. ಸಂಘದ ಸಂಸ್ಥಾಪಕ ಅಧ್ಯಕ್ಷ ಎಸ್.ಕೆ. ದಾಸಪ್ಪ ಅವರ ಪರಿಶ್ರಮ ನಿಜಕ್ಕೂ ಶ್ಲಾಘನಾರ್ಹ ಎಂದು ಪ್ರಜಾಪ್ರಗತಿಯ ಸಂಪಾದಕ ಎಸ್. ನಾಗಣ್ಣ ತಿಳಿಸಿದರು.

ನಗರದ ಸೋಮೇಶ್ವರ ಕಲ್ಯಾಣ ಮಂಟಪದಲ್ಲಿ ಶ್ರೀ ಕನಕ ಪತ್ತಿನ ಸಹಕಾರ ಸಂಘದ 21ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಅವರು ಮಾತನಾಡಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ರಂಗನಾಥ್ ಎಸ್.ಕೆ. ದಾಸಪ್ಪ ಅವರು ಮಾತನಾಡಿ, 164.05 ಲಕ್ಷ ರೂ. ಷೇರು ಬಂಡವಾಳ, 6213.03 ಲಕ್ಷ ರೂ. ಠೇವಣಿಯನ್ನು, 7500.00 ಲಕ್ಷ ರೂ. ದುಡಿಯುವ ಬಂಡವಾಳ ಹೊಂದಿದ್ದು, 176.58 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದರು.

ಸಂಘದ ಎ ತರಗತಿಯ ಸದಸ್ಯರ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು, ಹಿರಿಯ ಷೇರುದಾರ ಸದಸ್ಯರನ್ನು ಸಮಾರಂಭದಲ್ಲಿ ಗೌರವಿಸಲಾಯಿತು.

ಉಪಾಧ್ಯಕ್ಷರಾದ ಎಸ್.ಪಿ. ಶಿವಶಂಕರ್, ನಿರ್ದೇಶಕರಾದ ಬಿ.ಜೆ. ಕರಿಯಪ್ಪ, ಡಾ. ಎಸ್. ಮಂಜುನಾಥ್, ಭಾನುಪ್ರಕಾಶ್. ಎಲ್., ಎಸ್. ಎಲ್. ರಂಗನಾಥ್, ಹೆಚ್. ಹೇಮಂತರಾಜು, ಹೆಚ್. ಸುರೇಶ್, ವಿ.ಜಿ. ಕನಕರಾಜು, ಆರ್. ಮಂಜುನಾಥ್, ಕಡೆಮನೆ ಎಸ್. ರವಿಕುಮಾರ್, ತ್ರಿವೇಣಿ ರಘುನಾಥ್, ಪುಟ್ಟರಂಗಮ್ಮ ಶ್ರೀಕಂಠ, ಸುಶೀಲ ವಿರೂಪಾಕ್ಷ, ಪ್ರಧಾನ ವ್ಯವಸ್ಥಾಪಕ ಆರ್. ಲಕ್ಷ್ಮಣ್ ಉಪಸ್ಥಿತರಿದ್ದರು.

## ಜಾಹಿರಾತು ಮನವಿ




ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಮಾಸಿಕ ಸಹಕಾರ ಪತ್ರಿಕೆಯನ್ನು ಪ್ರಕಟ ಮಾಡುತ್ತಿದ್ದು, ಪತ್ತಿನ ಸಹಕಾರ ಚಳವಳಿಯ ಪೂರಕ ಚಟುವಟಿಕೆಗಳಿಗೆ ಪ್ರಚಾರ ನೀಡುತ್ತಾ ಬರುತ್ತಿದೆ. ರಾಜ್ಯದ ಪತ್ತಿನ ಸಹಕಾರ ಸಂಘಗಳು ತಮ್ಮ ಕಾರ್ಯಪ್ರಗತಿಯ ವಿವರಗಳನ್ನು ಜಾಹಿರಾತು ಮೂಲಕ ಪ್ರಕಟಿಸಿದ್ದಲ್ಲಿ ಉತ್ತಮ ಪ್ರಚಾರ ಪಡೆದುಕೊಳ್ಳಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಪತ್ತಿನ ಸಹಕಾರ ಸಂಘಗಳ ಮಹಾಮಂಡಳವು ರಿಯಾಯಿತಿ ದರದಲ್ಲಿ ಜಾಹಿರಾತುಗಳನ್ನು ಪ್ರಕಟಿಸಲು ಉತ್ಸುಕವಾಗಿದೆ. ಸಹಕಾರ ಸಂಸ್ಥೆಗಳು ಸಂಪೂರ್ಣ ಮಾಹಿತಿಗಳೊಂದಿಗೆ ಜಾಹಿರಾತುಗಳನ್ನು ನೀಡಲು ಕೋರಿದೆ. ಜಾಹಿರಾತು ದರಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ದೂರವಾಣಿ ಹಾಗೂ ಮೊಬೈಲ್ ಸಂಖ್ಯೆಗಳಿಗೆ ಸಂಪರ್ಕಿಸಲು ಕೋರಿದೆ.

ಮೊಬೈಲ್ ನಂ. 9008407988,

ದೂರವಾಣಿ : 080 23564444, 23464033, 23464034

ಇ–ಮೇಲ್ : ksccsfltd@gmail.com, info@ksccsf.org

ವೆಬ್‌ಸೈಟ್ : www.ksccsf.org

## ಸಹಕಾರ ವಾರ್ತಾ ಪತ್ರಿಕೆಗೆ ಚಂದಾದಾರರಾಗಲು ಮನವಿ

ಕರ್ನಾಟಕ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪ್ರಕಟಿಸುತ್ತಿರುವ ಮಾಸಿಕ ಸಹಕಾರ ವಾರ್ತಾ ಪತ್ರಿಕೆಗೆ ಈಗಾಗಲೇ ಚಂದಾದಾರರಾಗಿರುವ ಸದಸ್ಯ ಸಹಕಾರ ಸಂಘಗಳನ್ನು ಹೊರತುಪಡಿಸಿ ಇನ್ನುಳಿದ ಪತ್ತಿನ ಸಹಕಾರ ಸಂಘಗಳು "ಸಹಕಾರ ಮಾಸಿಕ ವಾರ್ತಾ ಪತ್ರಿಕೆ"ಗೆ ಚಂದಾದಾರರಾಗಲು ಈ ಮೂಲಕ ಮನವಿ ಮಾಡಲಾಗಿದೆ.

**– ಸಂಪಾದಕರು**

## ಸಂಪಾದಕೀಯ



ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ಅಧ್ಯಕ್ಷರು

ಪತ್ತಿನ ಸಹಕಾರ ಚಳುವಳಿಯಲ್ಲಿ 25 ಲಕ್ಷಕ್ಕೂ ಅಧಿಕ ಸದಸ್ಯರಿದ್ದಾರೆಂದು ಅಂದಾಜಿಸಲಾಗಿದೆ. ಪ್ರಸ್ತುತ ರಾಜ್ಯದ ಜನಸಂಖ್ಯೆ ಅಂದಾಜು 6.50 ಕೋಟಿ ಇದ್ದು ನಾಗರೀಕರು ಸಹಕಾರ ಸಂಘಗಳಲ್ಲಿ ಸದಸ್ಯತ್ವ ಪಡೆದು ಸಹಕಾರ ಚಳುವಳಿಯಲ್ಲಿ ಸಕ್ರಿಯರಾಗಿ ಪಾಲ್ಗೊಳ್ಳಲು ಸಹಕಾರಿಗಳು ಜಾಗೃತಿ ಮೂಡಿಸುವುದರ ಜೊತೆಗೆ ಸಹಕಾರ ಸಂಘಗಳ ಬಗ್ಗೆ ಜನರಲ್ಲಿ ವಿಶ್ವಾಸ, ನಂಬಿಕೆ ಹೆಚ್ಚಿಸುವ ಕೆಲಸ ಮಾಡಬೇಕಾಗಿದೆ. ಇದರಿಂದ ಯುವಜನರು, ಮಹಿಳೆಯರು ಚಳುವಳಿಯಲ್ಲಿ ಪಾಲ್ಗೊಂಡು ಉದ್ಯಮಶೀಲರಾಗಲು, ಸ್ವಾವಲಂಬಿಗಳಾಗಲು ನಾವೆಲ್ಲರೂ ಪರಿಣಾಮಕಾರಿ ಜಾಗೃತಿ ಮೂಡಿಸಬೇಕಾಗಿದೆ.

# ಪತ್ತಿನ ಸಹಕಾರ ವಲಯದ ಬಲವರ್ಧನೆ ಅಗತ್ಯ

ಕರ್ನಾಟಕ ರಾಜ್ಯದ ಸಹಕಾರ ಚಳುವಳಿ ಮಂಚೂಣಿಯಲ್ಲಿದೆ ಎಂಥಹುದೇ ಪರಿಸ್ಥಿತಿ ಬಂದರೂ ಅದನ್ನು ಎದುರಿಸುವ ಶಕ್ತಿ ಇದೆ ಎಂದು ಸಹಕಾರಿ ಸಂಸ್ಥೆಗಳು ಸಾಬೀತುಪಡಿಸಿವೆ. ರಾಜ್ಯದಲ್ಲಿ 5000ಕ್ಕೂ ಅಧಿಕ ಪತ್ತಿನ ಸಹಕಾರ ಸಂಘಗಳು ಕ್ರಿಯಾಶೀಲವಾಗಿದ್ದು, ಸದಸ್ಯರ ಆರ್ಥಿಕ ಬೇಡಿಕೆಗಳನ್ನು ಪೂರೈಸುವುದರ ಮೂಲಕ ಸೇವೆಗಳಲ್ಲಿ ತೊಡಗಿಸಿಕೊಂಡಿರುವುದು ಸಂತೋಷಕರ ವಿಚಾರವಾಗಿದೆ.

ಈ ವರ್ಷ ಸೆಪ್ಟೆಂಬರ್ 25ಕ್ಕೆ ರಾಜ್ಯದ ಎಲ್ಲಾ ರೀತಿಯ ಸಹಕಾರ ಸಂಘಗಳ ವಾರ್ಷಿಕ ಮಹಾಸಭೆಗಳು ಪೂರ್ಣಗೊಂಡಿವೆ. ಬಹುತೇಕ ಸಹಕಾರ ಸಂಘಗಳು ಉತ್ತಮ ಸೇವೆಯ ಜೊತೆಗೆ ಪ್ರಗತಿಯ ಪಥದಲ್ಲಿ ಸಾಗಿವೆ. ರಾಜ್ಯದ ಜನಸಂಖ್ಯೆಗೆ ಹೋಲಿಸಿದಾಗ ರಾಜ್ಯದ ಸಹಕಾರ ಚಳುವಳಿ ಮತ್ತಷ್ಟು ವಿಶಾಲವಾಗಿ ಬೆಳೆಯಬೇಕಾದ ಅಗತ್ಯತೆ ಕಂಡುಬರುತ್ತದೆ. ಸಾರ್ವಜನಿಕರು ಸಹಕಾರ ವ್ಯವಸ್ಥೆಯಲ್ಲಿ ಸಿಗುವ ಎಲ್ಲಾ ಸೌಲಭ್ಯಗಳನ್ನು ಪಡೆದು ಸ್ವಾವಲಂಬಿಗಳಾಗಬೇಕು ಎಂಬುದು ಸಹಕಾರಿಗಳ ಅಭಿಲಾಷೆಯಾಗಿದೆ.

ಪತ್ತಿನ ಸಹಕಾರ ಚಳುವಳಿಯಲ್ಲಿ 25 ಲಕ್ಷಕ್ಕೂ ಅಧಿಕ ಸದಸ್ಯರಿದ್ದಾರೆಂದು ಅಂದಾಜಿಸಲಾಗಿದೆ. ಪ್ರಸ್ತುತ ರಾಜ್ಯದ ಜನಸಂಖ್ಯೆ ಅಂದಾಜು 6.50 ಕೋಟಿ ಇದ್ದು ನಾಗರೀಕರು ಸಹಕಾರ ಸಂಘಗಳಲ್ಲಿ ಸದಸ್ಯತ್ವ ಪಡೆದು ಸಹಕಾರ ಚಳುವಳಿಯಲ್ಲಿ ಸಕ್ರಿಯರಾಗಿ ಪಾಲ್ಗೊಳ್ಳಲು ಸಹಕಾರಿಗಳು ಜಾಗೃತಿ ಮೂಡಿಸುವುದರ ಜೊತೆಗೆ ಸಹಕಾರ ಸಂಘಗಳ ಬಗ್ಗೆ ಜನರಲ್ಲಿ ವಿಶ್ವಾಸ, ನಂಬಿಕೆ ಹೆಚ್ಚಿಸುವ ಕೆಲಸ ಮಾಡಬೇಕಾಗಿದೆ. ಇದರಿಂದ ಯುವಜನರು, ಮಹಿಳೆಯರು ಚಳುವಳಿಯಲ್ಲಿ ಪಾಲ್ಗೊಂಡು ಉದ್ಯಮಶೀಲರಾಗಲು, ಸ್ವಾವಲಂಬಿಗಳಾಗಲು ನಾವೆಲ್ಲರೂ ಪರಿಣಾಮಕಾರಿ ಜಾಗೃತಿ ಮೂಡಿಸಬೇಕಾಗಿದೆ. ಇದರಿಂದ ಮುಂದಿನ ತಲೆಮಾರಿನಲ್ಲಿ ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿಸಿಕೊಂಡು ಸಹಕಾರ ಚಳುವಳಿಯನ್ನು ಬೆಳೆಸಬಲ್ಲರು.

**ಅಕ್ಟೋಬರ್ ಮಾಹೆಯಲ್ಲಿ ವಿಶ್ವ ವಿಖ್ಯಾತ ನಾಡಹಬ್ಬ ದಸರಾ, ವಿಜಯದಶಮಿ ಹಾಗೂ ದೀಪಾವಳಿ ಹಬ್ಬಗಳನ್ನು ಆಚರಿಸಲಾಗುತ್ತಿದ್ದು ಸಮಸ್ತ ಸಹಕಾರಿ ಬಂಧುಗಳಿಗೆ ನಾಡಹಬ್ಬ ದಸರಾ ಮತ್ತು ದೀಪಾವಳಿಯ ಶುಭಾಶಯಗಳನ್ನು ಸಲ್ಲಿಸುತ್ತಾ ಜನರು ಉತ್ತಮ ಜೀವನ ಸಾಗಿಸಲಿ ಎಂದು ಹಾರೈಸುತ್ತೇನೆ**

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org



**ಸಂಪಾದಕ ಮಂಡಳಿ**


ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**

ಉಪಸಂಪಾದಕರು :
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್ ಗೌಡ**

ಸದಸ್ಯರು :
**ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ಜಿ. ಮಲ್ಲಿಕಾರ್ಜುನಯ್ಯ**
**ಶ್ರೀ ಹೆಚ್.ಟಿ. ನಾಗೇಶ್, ಶ್ರೀ ಚಿತ್ತರಂಜನ್ ಬೋಳಾರ್**

ಸಂಪಾದಕರು :
**ಶ್ರೀಮತಿ ಪಿ. ಆಶಾಲತಾ**
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)


# ಅ. 2 ರಿಂದ ಯಶಸ್ವಿನಿ ಯೋಜನೆ ಜಾರಿ : ಎಸ್.ಟಿ. ಸೋಮಶೇಖರ್



**ಬೆಂಗಳೂರು :** ರಾಜ್ಯದ ರೈತ ಸಮುದಾಯದ ಬಹುದಿನಗಳ ಬೇಡಿಕೆಯಾದ 'ಯಶಸ್ವಿನಿ' ಯೋಜನೆಯನ್ನು ಹಾಲಿ ಇರುವ ಪರಿಸ್ಥಿತಿಗೆ ತಕ್ಕಂತೆ ಪರಿಷ್ಕರಿಸಿ ಅಕ್ಟೋಬರ್ 2 ರಿಂದ ಮರುಜಾರಿಗೊಳಿಸಲಾಗುವುದು ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ವಿಧಾನಪರಿಷತ್‌ನಲ್ಲಿ ತಿಳಿಸಿದರು.

ಕಾಂಗ್ರೆಸ್‌ನ ಸದಸ್ಯ ಪ್ರಕಾಶ್ ಕೆ. ರಾಥೋಡ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಗ್ರಾಮೀಣ ಪ್ರದೇಶದ ರೈತ ಕುಟುಂಬಗಳಿಗೆ ಅತ್ಯುತ್ತಮ ವೈದ್ಯಕೀಯ ಸೌಲಭ್ಯ ಒದಗಿಸಲು ಬಜೆಟ್‌ನಲ್ಲಿ ರೂ. 300 ಕೋಟಿ ಒದಗಿಸುವುದಾಗಿ ಘೋಷಿಸಲಾಗಿದೆ. ಯೋಜನೆಯಡಿ ಸೇರ್ಪಡೆಯಾಗಲು ಸದಸ್ಯತ್ವದ ಮಾನದಂಡ ರೂಪಿಸಲಾಗುತ್ತಿದೆ. ಹೊಸದಾಗಿ ಯಶಸ್ವಿನಿ ಟ್ರಸ್ಟ್ ರಚಿಸುವ ಕಾರ್ಯ, ಯಾವ ಕಾಯಿಲೆಗಳನ್ನು ಹಾಗೂ ಯಾವ್ಯಾವ ಆಸ್ಪತ್ರೆಗಳನ್ನು ಒಳಪಡಿಸುವ ಕಾರ್ಯ ಪ್ರಗತಿ ಹಂತದಲ್ಲಿದೆ. ಅಲ್ಲದೇ ಸಹಕಾರಿ ಬ್ಯಾಂಕುಗಳ ಸದಸ್ಯರನ್ನು ಯೋಜನೆಗೆ ಒಳಪಡಿಸುವ ಉದ್ದೇಶ ಹೊಂದಲಾಗಿದೆ ಎಂದು ಹೇಳಿದರು.

**ಯಶಸ್ವಿ ಜಾರಿಗೆ ಸಿದ್ಧತೆ :** ಈ ಹಿಂದೆ ಇದ್ದ 'ಯಶಸ್ವಿನಿ' ಯೋಜನೆಯನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಆರೋಗ್ಯ ಯೋಜನೆ ಒಂದುಗೂಡಿಸಿ ಜಾರಿಗೆ ತರಲು ಯಶಸ್ವಿನಿ ಯೋಜನೆಯನ್ನು ಆರೋಗ್ಯ ಇಲಾಖೆಗೆ ವಿಲೀನಗೊಳಿಸಲಾಗಿದ್ದು, ಈ ಯೋಜನೆ ಮರು ಜಾರಿಗೆ ತರಬೇಕಾದರೆ ಆರೋಗ್ಯ ಇಲಾಖೆಯಿಂದ ಬೇರ್ಪಡಿಸುವ ಜೊತೆಗೆ ಆರ್ಥಿಕ ಇಲಾಖೆ ಒಪ್ಪಿಗೆ ಪಡೆಯಬೇಕಾಗಿತ್ತು.

ಈಗ ಎರಡು ಇಲಾಖೆಗಳು ಒಪ್ಪಿಗೆ ನೀಡಿವೆ. ಈಗಾಗಲೇ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಆರೋಗ್ಯ ಯೋಜನೆ ಇರುವಾಗ ಮತ್ತೊಂದು ಯೋಜನೆ ಜಾರಿಗೆ ತರುವಾಗ ಎಲ್ಲ ರೀತಿಯಿಂದ ಸಮಾಲೋಚಿಸಿ ತರಬೇಕಾಗುತ್ತದೆ. ಹಾಗಾಗಿ ಯೋಜನೆ ಜಾರಿಗೆ ಸ್ವಲ್ಪ ತಡವಾದರೂ ಯಶಸ್ವಿಯಾಗಿ ಜಾರಿಗೆ ತರುತ್ತೇವೆ. ಈಗಾಗಲೇ ಯೋಜನೆಯ 'ಲೋಗೋ' ಸಹ ಘೋಷಿಸಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

**ಸುಭಾಷಿತ :** ನೀವು ಎಲ್ಲರನ್ನೂ ಮೆಚ್ಚಿಸಲು ಪ್ರಯತ್ನಿಸಿದರೆ, ನೀವು ಯಾರನ್ನು ಮೆಚ್ಚಿಸುವುದಿಲ್ಲ, ಇತರರ ಸಂತೋಷಕ್ಕಾಗಿ ನಿಮ್ಮ ಜೀವನವನ್ನು ನಡೆಸುವುದು ಅಸಾಧ್ಯ. – ಸುಧಾಮೂರ್ತಿ


ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1500/-



**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

# ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ವಾರ್ಷಿಕ ಮಹಾಸಭೆ: ಪತ್ತಿನ ಸಹಕಾರ ಚಳುವಳಿ ಬಲಗೊಳಿಸಲು ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡರ ಮನವಿ




**ಬೆಂಗಳೂರು : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ 2021–22ನೇ ಸಾಲಿನ 18ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯು ದಿನಾಂಕ : 9.9.2022ರಂದು ಪತ್ತಿನ ಮಹಾಮಂಡಳದ ಅಧ್ಯಕ್ಷರಾದ ಶ್ರೀಮತಿ ಕೆ ಲಲಿತ ಜಿ.ಟಿ ದೇವೇಗೌಡ ಅಧ್ಯಕ್ಷತೆಯಲ್ಲಿ ನಗರದ ಕೆಇಬಿ ಇಂಜಿನಿಯರ್ಸ್ ಸಭಾಂಗಣದಲ್ಲಿ ನಡೆಯಿತು.**

ವಾರ್ಷಿಕ ಮಹಾಸಭೆಯ ಆರಂಭದಲ್ಲಿ ಪತ್ತಿನ ಮಹಾಮಂಡಳದ ಅಧ್ಯಕ್ಷರು ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರುಗಳುಗಳಿಂದ ದೀಪ ಬೆಳಗಿಸುವುದರೊಂದಿಗೆ ಪ್ರಾರಂಭವಾಯಿತು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅಧ್ಯಕ್ಷರಾದ ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡರವರು ರಾಜ್ಯದಲ್ಲಿ ಕಳೆದ ಎರಡು ವರ್ಷಗಳಲ್ಲಿ ಕೊರೋನಾ ಮಹಾಮಾರಿಯ ಪರಿಣಾಮದಿಂದ ಜನರು ಸಂಕಷ್ಟಕ್ಕೆ ಸಿಲುಕಿದ್ದರು. ಈ ಸಂದರ್ಭದಲ್ಲಿ ಪತ್ತಿನ ಸಹಕಾರ ಸಂಘಗಳು ಸದಸ್ಯರ ಆರ್ಥಿಕ ಅಗತ್ಯತೆಗಳನ್ನು ಪೂರೈಸುವುದರ ಮೂಲಕ ಪರಿಣಾಮಕಾರಿ ಸೇವೆ ಸಲ್ಲಿಸಿವೆ ಎಂದು ಶ್ಲಾಘಿಸಿದರು.

ರಾಜ್ಯದ ಜನಸಂಖ್ಯೆಗೆ ಹೋಲಿಕೆ ಮಾಡಿದಾಗ ಮತ್ತಷ್ಟು ಪತ್ತಿನ ಸಹಕಾರ ಸಂಘಗಳ ಸ್ಥಾಪನೆ ಅವಶ್ಯಕತೆ ಇರುವುದನ್ನು ವ್ಯಕ್ತಪಡಿಸಿದ ಅವರು ಪತ್ತಿನ ಸಹಕಾರ ಚಳುವಳಿ ಪರಿಣಾಮಕಾರಿಗೊಳಿಸಲು ಸದಸ್ಯ ಪ್ರತಿನಿಧಿಗಳಲ್ಲಿ ಮನವಿ ಮಾಡಿದರು ರಾಜ್ಯದಲ್ಲಿ ಅಂದಾಜು 5000 ಪತ್ತಿನ ಸಹಕಾರ ಸಂಘಗಳಿದ್ದು, ಪತ್ತಿನ ಸಹಕಾರ ಮಹಾಮಂಡಳದಲ್ಲಿ ಅಂದಾಜು 2,000 ಸಂಘಗಳು ಸದಸ್ಯತ್ವ ಪಡೆದಿವೆ ಎಂದ ಅವರು ಮುಂಬರುವ ದಿನಗಳಲ್ಲಿ ಎಲ್ಲಾ ಪತ್ತಿನ ಸಂಘಗಳು ಮಹಾಮಂಡಳದಲ್ಲಿ ಸದಸ್ಯರಾಗುವಂತೆ ಮನವಿ ಮಾಡಿದರು.



ರಾಜ್ಯದಲ್ಲಿ ಇ–ಸ್ಟ್ಯಾಂಪ್ ವ್ಯವಹಾರಗಳಿಗೆ ಪತ್ತಿನ ಮಹಾಮಂಡಳ ನೇತೃತ್ವ ವಹಿಸಿದ್ದು ವಾರ್ಷಿಕ 569 ಕೋಟಿ ರೂ. ಗಳಿಗೂ ಅಧಿಕ ವ್ಯವಹಾರವಾಗಿರುವುದನ್ನು ಅವರು ಸಭೆಗೆ ತಿಳಿಸಿದರು. ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿದ ಅವರು ಪತ್ತಿನ ಮಹಾಮಂಡಳವು ಶಿಕ್ಷಣ ತರಬೇತಿ ಮೂಲಕ ಮುಂಬರುವ ದಿನಗಳಲ್ಲಿ ಪರಿಣಾಮಕಾರಿ ಸೇವೆ ನೀಡಲು ಸಿದ್ಧವಿದೆ ಎಂದರು.

ಪತ್ತಿನ ಸಹಕಾರ ಮಹಾಮಂಡಳವು ನಿರ್ಮಾಣ ಮಾಡುತ್ತಿರುವ ಆಡಳಿತ ಕಚೇರಿ ಕಟ್ಟಡ ಕಾಮಗಾರಿ ಶೇ. 80ರಷ್ಟು ಪೂರ್ಣಗೊಂಡಿದ್ದು ಅತಿ ಶೀಘ್ರದಲ್ಲಿಯೇ ಕಾರ್ಯಾರಂಭ ಮಾಡಲಿದೆ ಎಂದು ಸಭೆಗೆ ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡರು ತಿಳಿಸಿದರು. ಪ್ರಭಾರ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಆಶಾಲತಾ ಪಿ. ಅವರು ಸಭೆಯ ನೋಟಿಸ್ ಓದಿದರು.

ನಂತರ ಮಹಾಮಂಡಳದ ಉಪಾಧ್ಯಕ್ಷರಾದ ಕೆ.ಕೆ.ಮಹೇಂದ್ರ ಪ್ರಸಾದ್‌ಗೌಡ, ನಿರ್ದೇಶಕರುಗಳಾದ ಸಿ.ಎಂ.ಮಾರೇಗೌಡ, ಬಿ.ಡಿ. ಭೂಕಾಂತ, ವಿ. ರಾಜು, ಡಾ. ಸಂಜಯ್ ಪಿ. ಹೊಸಮಠ, ಎಂ.ಜೆ. ನರೇಂದ್ರಕುಮಾರ, ಡಿ. ಚನ್ನಯ್ಯ, ಕೆ. ಕೃಷ್ಣಮೂರ್ತಿ, ಜಿ. ಮಲ್ಲಿಕಾರ್ಜುನಯ್ಯ, ತಮ್ಮಣ್ಣ ಬಾಲಪ್ಪ ಕೆಂಚರಡ್ಡಿ, ಧರೇಪ್ಪ ಮಹದೇವ




ಅಲಗೂರ, ಗುರುಪಾದಪ್ಪ ಗೌಡ ಪಾಟೀಲ, ಹೊನ್ನಯ್ಯ ವಿ ಹಿರೇಮಠ, ಪಿ.ಕೆ. ಜಯಕೃಷ್ಣೇಗೌಡ, ಶೇಖರಗೌಡ ಮಾಲಿ ಪಾಟೀಲ, ಹೆಚ್.ಟಿ. ನಾಗೇಶ್, ಡಿ.ಆರ್. ನಾಗೇಶಪ್ಪ ಉಮೇಶ್ ಶಿ ಬಾಳಿ, ರವೀಂದ್ರ ಪ್ರಹ್ಲಾದ ಕಲಬುರ್ಗಿ, ಚಿತ್ತರಂಜನ್ ಬೋಳಾರ್ ಅವರುಗಳು ಸೇರಿದಂತೆ ನಿರ್ದೇಶಕರುಗಳು ವಾರ್ಷಿಕ ವರದಿಯ ಹಲವು ವಿವರಗಳನ್ನು ಸಭೆಗೆ ಮಂಡಿಸಿದರು ಹಾಗೂ ಸದಸ್ಯರೊಂದಿಗೆ ಮುಕ್ತವಾಗಿ ಚರ್ಚೆ ನಡೆಸಿದರು. ಇ–ಸ್ಟಾಂಪಿಂಗ್ ವ್ಯವಹಾರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿರುವ ಕೆಳಕಂಡ ಸಹಕಾರ ಸಂಘಗಳ ಪ್ರತಿನಿಧಿಗಳನ್ನು ಗೌರವಿಸಲಾಯಿತು.

ಸಭೆಗೆ ವಿಶೇಷ ಅತಿಥಿಗಳಾಗಿ ಆಗಮಿಸಿದ್ದ ಹಿರಿಯ ಸಹಕಾರಿ ಮುಖಂಡರು, ಮಾಜಿ ಸಚಿವರಾದ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಅವರನ್ನು ಸಹಕಾರಿಗಳ ಪರವಾಗಿ ಶ್ರೀಮತಿ ಕೆ.ಲಲಿತ ಜಿ.ಟಿ. ದೇವೇಗೌಡರು ಸನ್ಮಾನಿಸಿ ಗೌರವಿಸಿದರು. ಎಲ್ಲಾ ನಿರ್ದೇಶಕರುಗಳು ಉಪಸ್ಥಿತರಿದ್ದರು.

ಗ್ರೂಪ್–1 ವಿಭಾಗದಿಂದ ವಿಶ್ವ ಭಾರತಿ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿ., ಬೆಂಗಳೂರು. ನಾರಾಯಣ ವಿವಿಧೋದ್ದೇಶ ಸಹಕಾರ ಸಂಘ ನಿ., ಬೆಂಗಳೂರು, ಬಿ.ಎಸ್.ಆರ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಬೆಂಗಳೂರು, ಪ್ರಗತಿ ಮಹಿಳಾ ಸಹಕಾರ ಸಂಘ ನಿ., ಕೋರಮಂಗಲ, ಬೆಂಗಳೂರು, ಶ್ರೀ ಗೌರಿಗಣೇಶ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ.ಕೆ. ಆರ್.ಪುರಂ, ಬೆಂಗಳೂರು, ಇಂಡಿಯನ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ನಾಗರಭಾವಿ 2ನೇ ಹಂತ, ಬೆಂಗಳೂರು.

ಗ್ರೂಪ್–2 ವಿಭಾಗದಿಂದ ಶ್ರೀ ವಾಸವಿ ಅಭಿವೃದ್ಧಿ ಸಹಕಾರ ಸಂಘ ನಿ., ದಾವಣಗೆರೆ, ಶ್ರೀ ರೇಣುಕಾಂಬ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ದಾವಣಗೆರೆ, ಚಿತ್ರದುರ್ಗ ಜಿಲ್ಲಾ ವಾಲ್ಮೀಕಿ ಟ್ರೈಬಲ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಚಿತ್ರದುರ್ಗ, ಸರ್ಕಾರಿ ನೌಕರರ ವಿವಿಧೋದ್ದೇಶ ಸಹಕಾರ ಸಂಘ ತುಮಕೂರು, ಬನಶಂಕರಿ ಮಹಿಳಾ ವಿವಿಧೋದ್ದೇಶ ಗೃಹ ಕೈಗಾರಿಕಾ ಮಾರಾಟ ಸಹಕಾರ ಸಂಘ ನಿ., ಶಿಕಾರಿಪುರ, ಶಿವಮೊಗ್ಗ, ಶ್ರೀ ಯೋಗೀಶ್ವರ ಯಾಜ್ಞವಲ್ಕ್ಯ ಪತ್ತಿನ ಸಹಕಾರ ಸಂಘ ನಿ., ಕೋನಕುಂಟ್ಲು ಚಿಕ್ಕಬಳ್ಳಾಪುರ ಜಿಲ್ಲೆ.

ಗ್ರೂಪ್–3 ವಿಭಾಗದಿಂದ ಯಮಕನಮರಡಿ ಅರ್ಬನ್ ಕೋ–ಆಪ್ ಕ್ರಡಿಟ್ ಸೊಸಾಯಿಟಿ ಲಿ., ಯಮಕನಮರಡಿ ಬೆಳಗಾವಿ ಜಿಲ್ಲೆ. ಶ್ರೀ ಭಾಗ್ಯಲಕ್ಷ್ಮಿ ಪತ್ತಿನ ಸಹಕಾರ ಸಂಘ ನಿಯಮಿತ., ಖಾನಾಪುರ, ಬೆಳಗಾವಿ ಜಿಲ್ಲೆ, ಶ್ರೀ ಸಿದ್ಧಿವಿನಾಯಕ ಬಂಜಾರ ವಿವಿಧೋದ್ದೇಶಗಳ














ಸಹಕಾರಿ ಸಂಘ ನಿ., ಚವಾಟಗಲ್ಲಿ, ಬೆಳಗಾವಿ, ಹುಬ್ಬಳ್ಳಿ ವಕೀಲರ ಪತ್ತಿನ ಸಹಕಾರಿ ಸಂಘ ನಿ., ಹುಬ್ಬಳ್ಳಿ ಧಾರವಾಡ, ಅವಾಮಿ ಅರ್ಬನ್ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿ., ಕಛೇರಿ ರಸ್ತೆ, ಬೆಳಗಾವಿ ಜಿಲ್ಲೆ, ಧಾರವಾಡ ಜಿಲ್ಲಾ ಕಂದಾಯ ನೌಕರರ ಪತ್ತಿನ ಸಹಕಾರ ಸಂಘ ನಿ., ಯು.ಬಿ.ಹಿಲ್, ಧಾರವಾಡ.

ಗ್ರೂಪ್–4 ವಿಭಾಗದಿಂದ ಹುನಗುಂದ ಪಟ್ಟಣ ಪತ್ತಿನ ಸಹಕಾರಿ ಸಂಘ ನಿ., ಹುನಗುಂದ, ಬಾಗಲಕೋಟೆ ವರದ ವಿನಾಯಕ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಪಾರ್ವತಿ ನಗರ ಬಳ್ಳಾರಿ, ಸಮನ್ವಯ ವಿವಿಧೋದ್ದೇಶ ಸಹಕಾರ ಸಂಘ ನಿ., ಜೇವರ್ಗಿ, ಗುಲ್ಬರ್ಗ ಜಿಲ್ಲೆ, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ನೌಕರರ ಪತ್ತಿನ ಸಹಕಾರ ಸಂಘ ನಿ.(ಶೋರಾಪುರ ಶಾಖೆ) ರಾಯಚೂರು, ಶೇಖ್ ಪತ್ತಿನ ಸಹಕಾರ ಸಂಘ ನಿ., ರಾಯಚೂರು, ಖ್ವಾಜಾ ಗರೀಬನವಾಜ ಮೈನಾರಿಟಿ ಮಲ್ಟಿಪರಪಸ್ ಸೋಸಾಯಿಟಿ ಲಿ., (ಬಿಜಾಪುರ–7 ಶಾಖೆ) ವಿಜಯಪುರ.

ಗ್ರೂಪ್–5 ವಿಭಾಗದಿಂದ ರಾಜು ಕ್ಷತ್ರಿಯ ಪತ್ತಿನ ಸಹಕಾರ ಸಂಘ ನಿ., ಮೈಸೂರು, ಆತ್ಮಶಕ್ತಿ ವಿವಿಧೋದ್ದೇಶ ಸಹಕಾರ ಸಂಘ ನಿ., (ಕರಂಗಲ್ಪಾಡಿ ಶಾಖೆ) ದಕ್ಷಿಣಕನ್ನಡ ಜಿಲ್ಲೆ, ಶ್ರೀ ಲಕ್ಷ್ಮೀ ವಿವಿಧೋದ್ದೇಶ ಸಹಕಾರ ಸಂಘ ನಿ., ಮೈಸೂರು ಶ್ರೀ ಶ್ರೀಕಂಠೇಶ್ವರ ವಿವಿಧೋದ್ದೇಶಗಳ ಸಹಕಾರ ಸಂಘ ನಿಯಮಿತ, (ಗುಂಡ್ಲುಪೇಟೆ ಶಾಖೆ) ಮೈಸೂರು, ಅರಸು ಮಂಡಳಿ ಪತ್ತಿನ ಸಹಕಾರ ಸಂಘ ನಿ., ಮೈಸೂರು, ನಾಗಮಂಗಲ ತಾಲ್ಲೂಕು ರಾಜ್ಯ ಸರ್ಕಾರಿ ನೌಕರರ ಪತ್ತಿನ ಸಹಕಾರ ಸಂಘ ನಿ., ನಾಗಮಂಗಲ, ಮಂಡ್ಯ ಹಾಜರಿದ್ದ ಇ–ಸ್ಟಾಂಪಿಂಗ್ ಕೇಂದ್ರಗಳ ಪ್ರತಿನಿಧಿಗಳಿಗೆ ಆಯಾ ವಿಭಾಗದ ಆಡಳಿತಮಂಡಳಿ ಸದಸ್ಯರು ಸನ್ಮಾನಿಸಿ ಅಭಿನಂದಿಸಿದರು.

## ದಸರಾ ಉತ್ಸವಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಚಾಲನೆ

# "ಮಹಿಳಾ ಸಬಲೀಕರಣಕ್ಕೆ ಕರ್ನಾಟಕ ಮಾದರಿ"



**ಮೈಸೂರು:** ಚಾಮುಂಡಿ ಬೆಟ್ಟದ ಚಾಮುಂಡೇಶ್ವರಿ ದೇವಸ್ಥಾನದ ಆವರಣದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅದ್ದೂರಿ ನಾಡ ಹಬ್ಬ ದಸರಾಕ್ಕೆ ಚಾಲನೆ ನೀಡಿದರು. ಸೆಪ್ಟೆಂಬರ್ 26ರಂದು ದಸರಾ ಉತ್ಸವವನ್ನು ಉದ್ಘಾಟಿಸಿದ ಮೊದಲ ರಾಷ್ಟ್ರಪತಿ ಎಂಬ ಹೆಗ್ಗಳಿಕೆ ಅವರದು. ತಮ್ಮನ್ನು ಆಹ್ವಾನಿಸುವಾಗ ರಾಜ್ಯ ಸರ್ಕಾರ ನೀಡಿದ್ದ, ಮೈಸೂರು ರೇಷ್ಮೆಯನ್ನೇ ಉಟ್ಟುಕೊಂಡಿದ್ದ ಅವರು ಸನ್ಮಾನಿಸಿದಾಗ ತೊಡಿಸಿದ ಮೈಸೂರು ಪೇಟವನ್ನು ಖುಷಿಯಿಂದ ಮುಟ್ಟಿ ಸಂಭ್ರಮಿಸಿದರು.

ಬೃಹತ್ ವೇದಿಕೆಯ ಮೇಲೆ ಬೆಳ್ಳಿರಥದಲ್ಲಿ ಕುಳಿತ ನಾಡದೇವಿ ತಾಯಿ ಚಾಮುಂಡೇಶ್ವರಿಯ ಉತ್ಸವ ಮೂರ್ತಿಗೆ ಆರತಿ ಬೆಳಗಿ ಪುಷ್ಪಾರ್ಚನೆ ಮಾಡಿ ದೀಪ ಬೆಳಗಿ ಅವರು ಉತ್ಸವಕ್ಕೆ ವಿದ್ಯುಕ್ತ ಚಾಲನೆ ನೀಡಿದರು.


ನಂತರ ಮಾತನಾಡುತ್ತ ಭಕ್ತಿ, ಸಮಾನತೆ ಮತ್ತು ಮಹಿಳಾ ಸಬಲೀಕರಣದ ಐತಿಹಾಸಿಕ ಆದರ್ಶವೂ ಹೊರಹೊಮ್ಮಿದ ರಾಜ್ಯ ಕರ್ನಾಟಕ ಎಂದು ಮುರ್ಮು ಬಣ್ಣಿಸಿದರು.

ಶ್ರೀಮಂತ ಆಧ್ಯಾತ್ಮಿಕ ಪರಂಪರೆಯುಳ್ಳ ರಾಜ್ಯದಲ್ಲಿ 12ನೇ ಶತಮಾನದಲ್ಲಿ ಬಸವಣ್ಣ ಅಲ್ಲಮಪ್ರಭು ಮತ್ತು ಅಕ್ಕಮಹಾದೇವಿ ಮುಕ್ತಿಯ ಚಿಂತನೆಯ ಜೊತೆಗೆ ಎಲ್ಲಾ ಜಾತಿ ಜನರನ್ನು ಒಗ್ಗೂಡಿಸಿದ್ದರು. ಅನುಭವ ಮಂಟಪ ಸ್ಥಾಪಿಸಿದ ಬಸವಣ್ಣ ಆಧ್ಯಾತ್ಮಿಕ ಮತ್ತು ಸಾಮಾಜಿಕ ವಿಷಯಗಳ ಚರ್ಚೆಗೆ ವೇದಿಕೆ ಒದಗಿಸಿದ್ದರು. ಆದಿ ಶಂಕರಚಾರ್ಯರು ಶೃಂಗೇರಿಯಲ್ಲಿ ಶಾರದಾ ಪೀಠ ಸ್ಥಾಪಿಸಿದರು ರಾಜ್ಯದಲ್ಲಿ ಭಕ್ತಿ ಮಾರ್ಗದ ಜೊತೆಗೆ ವಚನ, ಗಾಯನ ಕೇಳುವ ಪರಂಪರೆ ಇಂದಿಗೂ ಮುಂದುವರೆದಿದೆ ಎಂದರು.

ದಸರಾ ಭಾರತೀಯ ಸಂಸ್ಕೃತಿಯ ಹೆಮ್ಮೆ ಮಹಿಳಾ ಶಕ್ತಿ ಗೌರವಿಸುವ ಉತ್ಸವ ಪ್ರೀತಿ ಕರುಣೆ ಕಾಳಜಿ ಮತ್ತು ತ್ಯಾಗವೇ ಮೈವೆತ್ತ ಮಹಿಳೆಯು ಅನ್ಯಾಯ, ಅಧರ್ಮದ ವಿರುದ್ಧ ದುರ್ಗಾ ಚಂಡಿಕಾ ಮತ್ತು ಚಾಮುಂಡಿಯ ಅವತಾರಗಳನ್ನು ಎತ್ತುತ್ತಾಳೆ. ಹೀಗಾಗಿಯೇ ನವರಾತ್ರಿಯಲ್ಲಿ ಮಹಿಳಾ ಶಕ್ತಿಯ ಆರಾಧನೆ ನಡೆಯುತ್ತದೆ, ಮಹಿಳಾ ಸಬಲೀಕರಣದ ಪ್ರಯತ್ನಗಳು ಹೆಚ್ಚಬೇಕು ಎಂದು ಹೇಳಿದರು ಮಹಿಷಾಸುರನನ್ನು ದೇವಿ ಚಾಮುಂಡಿ ಕೊಂದ ನಂತರ ಆಧ್ಯಾತ್ಮಿಕ ಮಹತ್ವವನ್ನು ಪಡೆದಿರುವ ಕ್ಷೇತ್ರದಲ್ಲಿ ದಸರಾ ಉತ್ಸವವನ್ನು ಉದ್ಘಾಟಿಸಿ, ಪರಂಪರೆಯೊಂದಿಗೆ ಮುನ್ನಡೆಯಲು ಅಪರೂಪದ ಅವಕಾಶ ದೊರಕಿದ್ದು ಸಂತಸ ತಂದಿದೆ ಎಂದರು. ರಾಜ್ಯಪಾಲ ಥಾವರ್ ಚಂದ್ ಗಹಲೋತ್ , ಕೇಂದ್ರ ಸಚಿವರಾದ ಪ್ರಹ್ಲಾದ ಜೋಶಿ, ಶೋಭಾ ಕರಂದ್ಲಾಜೆ, ಜಿಲ್ಲಾ ಉಸ್ತುವಾರಿ ಸಚಿವ ಎಸ್ ಟಿ ಸೋಮಶೇಖರ್, ಸಚಿವ ವಿ ಸುನಿಲ್ ಕುಮಾರ್ ವೇದಿಕೆಯಲ್ಲಿದ್ದರು.

ಕನ್ನಡ ನಾಡನ್ನು ಎಲ್ಲಾ ರಂಗದಲ್ಲಿಯೂ ಸರ್ವ ಶ್ರೇಷ್ಠವಾಗಿಸಬೇಕು ಎ0ದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು ಅವರು ಇಂದು ಚಾಮುಂಡಿ ಬೆಟ್ಟದಲ್ಲಿ ನಾಡ ದೇವತೆ ಶ್ರೀ ಚಾಮುಂಡೇಶ್ವರಿ ದೇವಿಯ ಅಗ್ರ ಪೂಜೆಯೊಂದಿಗೆ 2022ರ ದಸರಾ ಮಹೋತ್ಸವ ಉದ್ಘಾಟನಾ ಕಾರ್ಯಕ್ರಮದಲ್ಲಿ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮು ಅವರೊಂದಿಗೆ ಪಾಲ್ಗೊಂಡು ಮಾತನಾಡಿದರು. ಆರ್ಥಿಕ ಸಾಮಾಜಿಕ ಶೈಕ್ಷಣಿಕ ಧಾರ್ಮಿಕ ರಂಗಗಳಲ್ಲಿ ಕಟ್ಟುವ ಕೆಲಸ ಮಾಡಬೇಕಿದೆ ನಮ್ಮಲ್ಲಿರುವ ಬಡ ಜನರ ಬದುಕನ್ನು ಎತ್ತರಕ್ಕೆ ಕೊಂಡಯ್ಯ ಬೇಕಿದೆ. ಸರ್ವರಿಗೂ ಲೇಸನ್ನು ಬಯಸುವ ಕಲ್ಯಾಣದ ಚಿಂತನೆಯ ಅವಶ್ಯಕತೆ ಇದೆ ಅಂಥೆ ಸದ್ಬುದ್ಧಿ ನೀಡಿ ಕನ್ನಡ ನಾಡನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯಲಿ ಎಂದರು.

# ಅರಣ್ಯ ಸಚಿವ; ಸಹಕಾರಿ ಮುಖಂಡ ಉಮೇಶ್ ಕತ್ತಿ ನಿಧನ



**ಬೆಂಗಳೂರು** : ರಾಜ್ಯದ ಹಿರಿಯ ಸಹಕಾರಿ ಮುಖಂಡರು, ಆಹಾರ ಮತ್ತು ನಾಗರಿಕ ಪೂರೈಕೆ ಹಾಗೂ ಅರಣ್ಯ ಖಾತೆ ಸಚಿವರು ಆಗಿದ್ದ ಉಮೇಶ್ ಕತ್ತಿ ಅವರು ಸೆಪ್ಟೆಂಬರ್ 6 ರಂದು ಹೃದಯಾಘಾತದಿಂದ ನಿಧನರಾದರು.

62 ವರ್ಷ ವಯಸ್ಸಿನ ಉಮೇಶ ಕತ್ತಿ ಅವರು ಜನಪರ ನಿಲುವು, ಗಟ್ಟಿಧ್ವನಿ ಹಾಗೂ ಮುತ್ಸದ್ದಿ ಗುಣಗಳ ಕಾರಣಕ್ಕಾಗಿ ಸೋಲರಿಯದ ಸರದಾರ ಎಂದೇ ಖ್ಯಾತರಾಗಿದ್ದರು. ಸಹಕಾರ ಕ್ಷೇತ್ರ ಹಾಗೂ ಸಕ್ಕರೆ ಕಾರ್ಖಾನೆಗಳ ಅಭಿವೃದ್ಧಿಯಲ್ಲಿ ಅವರ ಪಾತ್ರ ದೊಡ್ಡದು.

ಇವರು ಪ್ರತಿನಿಧಿಸಿದ ಸಹಕಾರ ಸಂಘಗಳೆಲ್ಲ ಇಂದು ರಾಜ್ಯದ ಮಾದರಿ ಸಹಕಾರಿ ಸಂಸ್ಥೆಗಳಾಗಿ ಗುರುತಿಸಲ್ಪಡುತ್ತಿವೆ. ಸಂಕೇಶ್ವರದ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆ, ಬೆಲ್ಲದ ಬಾಗೇವಾಡಿ ಸಹಕಾರಿ ಸಂಸ್ಥೆ, ರಾಜ್ಯಕ್ಕೆ ಮಾದರಿ ಎನಿಸಿರುವ ಹುಕ್ಕೇರಿ ಗ್ರಾಮೀಣ ಸಹಕಾರ ವಿದ್ಯುತ್ ಸಂಘ, ಬೆಳಗಾವಿಯ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಬೆಳಗಾವಿ ಹಾಲು ಒಕ್ಕೂಟ ಇವುಗಳು ಮಾದರಿ ಸಂಸ್ಥೆಗಳೆನಿಸಿವೆ. ಹೀಗೆ ಸಹಕಾರಿ ಸಂಸ್ಥೆಗಳ ಅಭಿವೃದ್ಧಿಯಲ್ಲಿ ಕತ್ತಿ ಸಹೋದರರ ನಿಸ್ವಾರ್ಥ ಸೇವೆ ಅಪಾರ. ಸಹಕಾರ ಪಿತಾಮಹ ಅಪ್ಪಣಗೌಡ ಪಾಟೀಲರ ಗರಡಿಯಲ್ಲಿ ಪಳಗಿದ ಇವರು ರಾಜಕೀಯ, ಸಾಮಾಜಿಕ ಸೇವೆಯ ಜೊತೆ ಜೊತೆಯಲ್ಲೇ ಸಹಕಾರ ಸಂಘಗಳನ್ನೂ ಪುನಶ್ಚೇತನಗೊಳಿಸಿ ಬೆಳಗಾವಿಯನ್ನು ಸಹಕಾರ ಜಿಲ್ಲೆಯಾಗಿ ರೂಪಿಸಿದ ನಿಷ್ಣಾತರು.

ಇವರ ನಿಧನಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಹಕಾರ ಸಚಿವರು, ಪತ್ತಿನ ಮಹಾಮಂಡಳದ ಅಧ್ಯಕ್ಷರಾದ ಶ್ರೀಮತಿ ಕೆ.ಲಲಿತ ಜಿ.ಟಿ.ದೇವೇಗೌಡರವರು, ಉಪಾಧ್ಯಕ್ಷರಾದ ಶ್ರೀ ಕೆ.ಕೆ. ಮಹೇಂದ್ರಪ್ರಸಾದ್ ಗೌಡರವರು, ಆಡಳಿತಮಂಡಳಿ ನಿರ್ದೇಶಕರುಗಳು, ಸಹಕಾರಿ ಮುಖಂಡರು ಸಂತಾಪ ಸೂಚಿಸಿದ್ದಾರೆ.

# ರಾಜ್ಯ ಸಹಕಾರ ಸಚಿವರ ಸಮ್ಮೇಳನ : 33 ಲಕ್ಷ ರೈತರಿಗೆ ಸಾಲ ನೀಡುವ ಗುರಿ – ಎಸ್.ಟಿ. ಸೋಮಶೇಖರ್



**ನವದೆಹಲಿ** : ನವದೆಹಲಿಯಲ್ಲಿ ಸೆಪ್ಟೆಂಬರ್ 8 ಮತ್ತು 9ರಂದು ಎರಡು ದಿನಗಳ ಕಾಲ ನಡೆದ ರಾಜ್ಯ ಸಹಕಾರ ಸಚಿವರ ಸಮ್ಮೇಳನದಲ್ಲಿ ರಾಜ್ಯ ಸಹಕಾರ ಸಚಿವರಾದ ಎಸ್.ಟಿ.ಸೋಮಶೇಖರ್ ಅವರು ಭಾಗವಹಿಸಿ, ರಾಜ್ಯದ ಸಹಕಾರ ಕ್ಷೇತ್ರದ ಬಲವರ್ಧನೆ ಮತ್ತು ರಾಜ್ಯದಲ್ಲಿನ ಸಹಕಾರ ಸಂಸ್ಥೆಗಳಿಂದ ಸಾಲ ವಿತರಣೆ, ರೈತರ ಶ್ರೇಯೋಭಿವೃದ್ಧಿಗಾಗಿ ಕೈಗೊಂಡಿರುವ ಕಾರ್ಯಕ್ರಮಗಳ ಪ್ರಗತಿಯ ವಿವರಗಳನ್ನು ಸಭೆಯಲ್ಲಿ ಮಂಡಿಸಿದರು.

ಸಭೆಯಲ್ಲಿ ಸಚಿವರು ಮಾತನಾಡಿ, ಭಾರತದ ಆರ್ಥಿಕತೆಯಲ್ಲಿ ಸಹಕಾರಿ ಸಂಸ್ಥೆಗಳು ಪ್ರಮುಖ ಪಾತ್ರವಹಿಸುತ್ತವೆ. ರಾಜ್ಯದ 1/3 ಜನಸಂಖ್ಯೆಯನ್ನು ಒಳಗೊಂಡಿರುವ 2.30 ಕೋಟಿ ಸದಸ್ಯರೊಂದಿಗೆ 45,000ಕ್ಕೂ ಹೆಚ್ಚು ಸಹಕಾರ ಸಂಸ್ಥೆಗಳನ್ನು ರಚಿಸಲಾಗಿದೆ. ಅಪೆಕ್ಸ್ ಬ್ಯಾಂಕ್, 21 ಡಿಸಿಸಿ ಬ್ಯಾಂಕ್‌ಗಳು ಮತ್ತು 6022 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಅಲ್ಪಾವಧಿ ಮತ್ತು ಮಧ್ಯಮ ಅವಧಿಯ ಕೃಷಿ ಸಾಲ ಮತ್ತು ದೀರ್ಘಾವಧಿಯ ಸಾಲ ವಿತರಣೆಗಾಗಿ 176 ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ (PCARD) ಬ್ಯಾಂಕ್‌ಗಳೊಂದಿಗೆ ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ (KASCARD) ಬ್ಯಾಂಕ್ ಮುಂಚೂಣಿಯಲ್ಲಿದೆ ಎಂದರು.

## ಸಹಕಾರ ನೀತಿಯ ಕರಡು ರಚನೆಗೆ ಅಮಿತ್ ಶಾರಿಂದ 47 ಸದಸ್ಯರ ಸಮಿತಿ ಘೋಷಣೆ

**ಹೊಸದಿಲ್ಲಿ :** ರಾಷ್ಟ್ರೀಯ ಸಹಕಾರ ನೀತಿಯ ಕರಡು ರಚಿಸಲು ರಾಷ್ಟ್ರ ಮಟ್ಟದ ಸಮಿತಿಯೊಂದನ್ನು ರೂಪಿಸುವುದಾಗಿ ಕೇಂದ್ರ ಗೃಹ ಹಾಗೂ ಸಹಕಾರಿ ಸಚಿವ ಅಮಿತ್ ಶಾ ಘೋಷಿಸಿದ್ದಾರೆ.



ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ 'ಸಹಕಾರ್ ಸೆ ಸಮೃದ್ಧಿ'ಯ ದೃಷ್ಟಿಕೋನವನ್ನು ಸಾಕಾರಗೊಳಿಸಲು ನೂತನ ರಾಷ್ಟ್ರೀಯ ಸಹಕಾರಿ ನೀತಿಯನ್ನು ರೂಪಿಸಲಾಗುತ್ತಿದೆ.

ಕೇಂದ್ರ ಸಂಪುಟದ ಮಾಜಿ ಸಚಿವ ಸುರೇಶ್ ಪ್ರಭಾಕರ್ ಪ್ರಭು ಅಧ್ಯಕ್ಷತೆಯ ರಾಷ್ಟ್ರೀಯ ಮಟ್ಟದ ಸಮಿತಿ ದೇಶದ ಎಲ್ಲ ಭಾಗಗಳ 47 ಸದಸ್ಯರನ್ನು ಒಳಗೊಂಡಿದೆ. ಈ ಸಮಿತಿ ಸಹಕಾರ ಕ್ಷೇತ್ರದ ತಜ್ಞರು; ರಾಷ್ಟ್ರ, ರಾಜ್ಯ, ಜಿಲ್ಲೆ ಹಾಗೂ ಪ್ರಾಥಮಿಕ ಸಹಕಾರ ಸಂಘಗಳ ಪ್ರತಿನಿಧಿಗಳು, ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಸಹಕಾರ ಸಂಘಗಳ ಕಾರ್ಯದರ್ಶಿಗಳು ಹಾಗೂ ರಿಜಿಸ್ಟ್ರಾರ್‌ಗಳು ಹಾಗೂ ಕೇಂದ್ರ ಸಚಿವಾಲಯ ಹಾಗೂ ಇಲಾಖೆಯ ಅಧಿಕಾರಿಗಳನ್ನು ಒಳಗೊಳ್ಳಲಿದೆ.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ (ಪಿಎಸಿಎಸ್)ಗಳ ಉನ್ನತಿಗೆ ಅನುಪಮವಾದ ನಿಲುವನ್ನು ಹೊಂದಿರುವ ರಾಷ್ಟ್ರೀಯ ಸಹಕಾರ ನೀತಿಯನ್ನು ಶೀಘ್ರದಲ್ಲಿ ಸಿದ್ಧಪಡಿಸಲಾಗುವುದು ಎಂದು ಅಮಿತ್ ಶಾ ಅವರು ಇತ್ತೀಚೆಗೆ ಹೇಳಿದ್ದರು.

ಸಹಕಾರ ಸಂಸ್ಥೆಗಳ ಸರ್ವತೋಮುಖ ಅಭಿವೃದ್ಧಿಗೆ ಅನುಕೂಲವಾಗುವಂತೆ ಹಾಗೂ ಅವುಗಳಿಗೆ ಅಗತ್ಯ ಬೆಂಬಲ, ಉತ್ತೇಜನ ಮತ್ತು ಸಹಾಯವನ್ನು ಒದಗಿಸುವ ಉದ್ದೇಶದೊಂದಿಗೆ 2002ರಲ್ಲಿ ಸಹಕಾರ ಸಂಸ್ಥೆಗಳ ಕುರಿತು ಈಗ ಅಸ್ತಿತ್ವದಲ್ಲಿರುವ ರಾಷ್ಟ್ರೀಯ ನೀತಿ ರೂಪಿಸಲಾಗಿತ್ತು. ಇದರಿಂದ ಸಹಕಾರಿ ಸಂಸ್ಥೆಗಳು ಸ್ವಾಯತ್ತ, ಸ್ವಾವಲಂಬಿ ಹಾಗೂ ಪ್ರಜಾಸತ್ತಾತ್ಮಕ ಸಂಸ್ಥೆಗಳಾಗಿ ಕಾರ್ಯ ನಿರ್ವಹಿಸುತ್ತಿವೆ. ಅಲ್ಲದೆ, ತಮ್ಮ ಸದಸ್ಯರಿಗೆ ಉತ್ತರದಾಯಿಯಾಗಿದೆ ಹಾಗೂ ರಾಷ್ಟ್ರೀಯ ಆರ್ಥಿಕತೆಗೆ ಮಹತ್ವದ ಕೊಡುಗೆ ನೀಡುತ್ತದೆ.

"ಈಗ ದೇಶದ ಉದ್ದಗಲಕ್ಕೂ ಹರಡಿರುವ ಸುಮಾರು 29 ಕೋಟಿ ಸದಸ್ಯರ ಆಧಾರದೊಂದಿಗೆ ಭಾರತದಲ್ಲಿ ಸುಮಾರು 8.5 ಕೋಟಿ ಸಹಕಾರಿ ಸೊಸೈಟಿಗಳು ಇವೆ. ಈ ಕೋ-ಆಪರೇಟಿವ್ ಸೊಸೈಟಿಗಳು ಕೃಷಿ ಉತ್ಪನ್ನ ಸಂಸ್ಕರಣೆ, ಹೈನುಗಾರಿಕೆ, ವಸತಿ, ಮೀನುಗಾರಿಕೆ, ನೇಯ್ಗೆ ಹಾಗೂ ಸಾಲ ಮಾರುಕಟ್ಟೆಯಲ್ಲಿ ತೊಡಗಿಕೊಂಡಿವೆ" ಎಂದು ಸಹಕಾರ ಸಚಿವಾಲಯ ತನ್ನ ಹೇಳಿಕೆಯಲ್ಲಿ ಉಲ್ಲೇಖಿಸಿದೆ.

ಸಮಿತಿಯಲ್ಲಿ ಪತ್ತಿನ ಸಂಘಗಳ ಮಹಾಮಂಡಳದ ನಿರ್ದೇಶಕರಾದ ಡಿ.ಬಿ. ಭೂಕಾಂತ ಅವರು ಸೇರ್ಪಡೆಯಾಗಿರುವುದು ಹೆಮ್ಮೆಯ ವಿಚಾರವಾಗಿದೆ.

## ಚಿಕ್ಕಮಗಳೂರು ಪದವೀಧರರ ಪತ್ತಿನ ಸಹಕಾರ ಸಂಘ ನಿ.,

# ನೂತನ, ಸುಸಜ್ಜಿತ ಆಡಳಿತ ಕಛೇರಿ ಕಟ್ಟಡ ಉದ್ಘಾಟನೆ

**ಚಿಕ್ಕಮಗಳೂರು :** ನಗರದ ಪದವೀಧರರ ಪತ್ತಿನ ಸಹಕಾರ ಸಂಘದ ನೂತನ, ಸುಸಜ್ಜಿತ ಆಡಳಿತ ಕಛೇರಿ ಕಟ್ಟಡವನ್ನು ಸೆಪ್ಟಂಬರ್ 07 ರಂದು ಸಾಂಕೇತಿಕವಾಗಿ ಉದ್ಘಾಟಿಸಲಾಯಿತು.



ಸೆಪ್ಟಂಬರ್ 06 ರಂದು ಅರಣ್ಯ ಮತ್ತು ಆಹಾರ ಖಾತೆ ಸಚಿವರಾದ ಉಮೇಶ್ ಕತ್ತಿ ಅವರು ಅಕಾಲಿಕ ಮರಣ ಹೊಂದಿದ ಕಾರಣ ಶೋಕಾಚರಣೆಯ ಹಿನ್ನಲೆಯಲ್ಲಿ ಕಾರ್ಯಕ್ರಮದಲ್ಲಿ ಎರಡು ನಿಮಿಷಗಳ ಸಂತಾಪ ಸೂಚಿಸಲಾಯಿತು. ನಂತರ ನಡೆದ ಸರಳ ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷರಾದ ಬಿ.ಸಿ.ಲೋಕಪ್ಪಗೌಡ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಸಂಘದ ಬೆಳವಣಿಗೆಗೆ ಕಾರಣಕರ್ತರಾದ ಸಹಕಾರ ಮುಖಂಡರುಗಳನ್ನು ಈ ಸಂದರ್ಭದಲ್ಲಿ ಸ್ಮರಿಸಿದರು. ಉದ್ಘಾಟನಾ ಸಮಾರಂಭದ ಇನ್ನುಳಿದ ಕಾರ್ಯಕ್ರಮಗಳನ್ನು ಸೆಪ್ಟಂಬರ್ 18 ರಂದು ನಡೆಯುವ ಸಂಘದ ವಾರ್ಷಿಕ ಮಹಾಸಭೆಯಲ್ಲಿ ನಡೆಸಲಾಗುವುದೆಂದು ಅವರು ತಿಳಿಸಿದರು.

ಸರಳ ಕಾರ್ಯಕ್ರಮದ ವೇದಿಕೆ ಮೇಲೆ ಸಂಘದ ಕಟ್ಟಡ ಸಮಿತಿ ಮುಖ್ಯಸ್ಥರಾದ ಡಾ. ಡಿ.ಎಲ್. ವಿಜಯಕುಮಾರ್ ಸಂಘದ ಉಪಾಧ್ಯಕ್ಷರಾದ ವೆಂಕಟೇಶ್ ಪೈ ಕೆ, ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರಾದ ಡಾ. ಜಿ.ಎಸ್. ಮಹಾಬಲ, ಲ್ಯಾಂಪ್ಸ್ ಸಹಾಯಕ ಯೋಜನಾಧಿಕಾರಿ ಹೆಚ್.ಡಿ. ಮಂಜುನಾಥ ಅವರು ಸೇರಿದಂತೆ ಸಂಘದ ಆಡಳಿತ ಮಂಡಳಿ ನಿರ್ದೇಶಕರುಗಳು ಹಾಗೂ ಸಹಕಾರಿ ಮುಖಂಡರುಗಳು ಉಪಸ್ಥಿತರಿದ್ದರು.

# ನೇಕಾರ ಫಲಾನುಭವಿಗಳಿಗೆ ಸರ್ಕಾರದ ಯೋಜನೆಗಳ ಅನುಷ್ಠಾನ : ಪ್ರಗತಿಯ ಪಥದಲ್ಲಿ...
# ಬನಹಟ್ಟಿ ಹಟಗಾರ ಸಹಕಾರಿ ಪತ್ತಿನ ಸಂಘ ನಿ., ಬನಹಟ್ಟಿ



ಬಾಗಲಕೋಟೆ ಜಿಲ್ಲೆ ನೇಕಾರಿಕೆಗೆ ಪ್ರಸಿದ್ಧಿಯಾಗಿದೆ. ಜಿಲ್ಲೆಯ ಬನಹಟ್ಟಿ ಪಟ್ಟಣದಲ್ಲಿ ವಿಶೇಷವಾಗಿ ನೇಕಾರ ಸಮುದಾಯದ ಅಭ್ಯುದಯಕ್ಕಾಗಿ ದಿ. ರುದ್ರಪ್ಪ ಪರಪ್ಪ ಮಂಡಿ ಇವರ ಅಧ್ಯಕ್ಷತೆಯಲ್ಲಿ "ಬನಹಟ್ಟಿ ಹಟಗಾರ ಸಹಕಾರಿ ಸಂಘ"ವು ದಿನಾಂಕ : 02–02–1994 ರಂದು ಸ್ಥಾಪನೆಗೊಂಡಿತು. ಪ್ರಸ್ತುತ ಸಂಘವು 2882 ಸದಸ್ಯರನ್ನು ಹಾಗೂ 1992ರನ್ನು ಸಹಸದಸ್ಯರನ್ನು ಹೊಂದಿದ್ದು ದಿನಾಂಕ : 31–03–2022ಕ್ಕೆ ರೂ. 1,31,55,100–00 ಷೇರು ಬಂಡವಾಳವನ್ನು ಹೊಂದಿದೆ.

ಈ ಸಹಕಾರ ಸಂಘವು 28 ವರ್ಷಗಳ ಸಾರ್ಥಕ ಸೇವೆಯನ್ನು ಪೂರೈಸಿ, ದಿನಾಂಕ: 6.11.2019 ರಂದು ಬೆಳ್ಳಿಹಬ್ಬವನ್ನು ಅದ್ದೂರಿಯಾಗಿ ಜಿಲ್ಲೆಯ ಸಹಕಾರಿಗಳು, ಸಚಿವರುಗಳು ಹಾಗೂ ಶಾಸಕರುಗಳ ಉಪಸ್ಥಿತಿಯಲ್ಲಿ ಆಚರಿಸಿಕೊಂಡಿದೆ. ಸಂಘವು ಸುಸಜ್ಜಿತ ನೂತನ ಕಟ್ಟಡವನ್ನು ಹೊಂದಿದ್ದು, ವ್ಯವಹಾರಗಳು ಸಂಪೂರ್ಣ ಗಣಕೀಕೃತಗೊಂಡಿರುತ್ತದೆ.

ಸಂಘದ ಆಡಳಿತ ಮಂಡಳಿ ಸದಸ್ಯರ ಬದ್ದತೆ, ಮಾರ್ಗದರ್ಶನ ಮತ್ತು ಸಿಬ್ಬಂದಿಯ ದಕ್ಷತೆಯಿಂದ ಸಂಘವು ಉತ್ತಮವಾಗಿ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದೆ.

| ಸಂಘದ ಪ್ರಗತಿ ಪಕ್ಷಿನೋಟ (ರೂ. ಲಕ್ಷಗಳಲ್ಲಿ) | | | | |
|---|---|---|---|---|
| ಅ.ನಂ | ವಿವರ | 12–13 | 16–17 | 21–22 |
| 1 | ಶೇರು ಬಂಡವಾಳ | 29.45 | 60.96 | 131.53 |
| 2 | ಕಾಯ್ದಿಟ್ಟ ನಿಧಿ | 28.93 | 50.03 | 134.18 |
| 3 | ಇತರ ನಿಧಿಗಳು | 62.95 | 113.59 | 261.51 |
| 4 | ಠೇವುಗಳು | 706.21 | 2055.77 | 4478.87 |
| 5 | ದುಡಿಯುವ ಬಂಡವಾಳ | 848.98 | 2487.72 | 5676.29 |
| 6 | ಹೂಡಿಕೆಗಳು | 159.40 | 180.99 | 233.25 |
| 7 | ಸಾಲ ಮತ್ತು ಮುಂಗಡಗಳು | 537.95 | 1278.58 | 2993.06 |
| 8 | ನಿವ್ವಳ ಲಾಭ | 21.42 | 48.49 | 113.32 |
| 9 | ಡಿವ್ಹಿಡೆಂಡ್ /ಲಾಭಾಂಶ | 15% | 15% | 20% |
| 10 | ವಸೂಲಿ ಪ್ರಮಾಣ | 95.74% | 94.03% | 91.61% |
| 11 | ಆಡಿಟ್ ವರ್ಗೀಕರಣ | "ಎ" | "ಎ" | "ಬಿ" |

ಸಂಘದ ಈ ಎಲ್ಲಾ ಅಭಿವೃದ್ಧಿ ಕಾರ್ಯಗಳಿಗೆ ಕಾರಣೀಭೂತರಾದ ಕ್ರಿಯಾಶೀಲ ಆಡಳಿತ ಮಂಡಳಿ ನಿರ್ದೇಶಕರು, ಅಧಿಕಾರಿಗಳ ಹಾಗೂ ಸಿಬ್ಬಂದಿಗಳ ಪ್ರಾಮಾಣಿಕ ಪರಿಶ್ರಮ ಕಾರಣ ಎನ್ನಬಹುದು. ಈ ಸಂಘವು ನಿತಂತರವಾಗಿ ಪ್ರಗತಿಯ ಪಥದಲ್ಲಿ ಮುನ್ನಡೆಯುತ್ತಿದ್ದು ಇತರೆ ಸಹಕಾರ ಸಂಸ್ಥೆಗಳಿಗೆ ಮಾದರಿಯಾಗಿದೆ.

**ಸಂಘದ ಸೌಲಭ್ಯಗಳು :** ದಿ : 31–03–2022 ಕ್ಕೆ ಸದಸ್ಯ, ಸಹಸದಸ್ಯರಿಂದ ಮತ್ತು ನಾಮಮಾತ್ರ ಸದಸ್ಯರಿಂದ ಒಟ್ಟು ಬರತಕ್ಕ ಸಾಲ ರೂ. 29,93,06,779–00 ಇರುತ್ತದೆ.

ಸಂಘವು ವಿತರಿಸುವ ಸಾಲದ ವಿಧಗಳು ಜಾಮೀನು ಸಾಲ, ಮುದ್ದತ ಸಾಲ, ವಾಹನ ಸಾಲ, ಬಂಗಾರ ಆಭರಣ ಸಾಲ, ಕಟ್ಟಡ ಸಾಲ, ವೇತನಾಧಾರಿತ ಸಾಲ, ನಗದುದ್ದರಿ ಸಾಲ. ಮತ್ತು ನೇಕಾರಿಕೆ ವೃತ್ತಿ ಮಾಡುವವರಿಗೆ ಶೇ. 1% ಮತ್ತು ಶೇ.3% ರ ಬಡ್ಡಿ ದರದಲ್ಲಿ ವಿಶೇಷವಾಗಿ ಸಾಲ ವಿತರಿಸಲಾಗುತ್ತಿದೆ.

ಮುದ್ದತ ಮೀರಿದ ಸಾಲದ ಪ್ರಮಾಣ ದಿನಾಂಕ 31–03–2022 ಕ್ಕೆ ಶೇ 8.39 ಇರುತ್ತದೆ. ಸರಕಾರದಿಂದ ನೇಕಾರರಿಗೆ ಬಡ್ಡಿ ಸಹಾಯಧನ ಮತ್ತು ಸಾಲ ಮನ್ನಾ ಯೋಜನೆಯನ್ನು ಪರಿಣಾಮಮಕಾರಿಯಾಗಿ ತಲುಪಿಸುತ್ತಾ ಬಂದಿದೆ. ಸಂಘವು 1237 ನೇಕಾರ ಫಲಾನುಭವಿಗಳಿಗೆ ರೂ. 82,83,871/– ಬಡ್ಡಿ ಸಹಾಯ ಧನ ಹಾಗೂ 484 ನೇಕಾರ ಫಲಾನುಭವಿಗಳಿಗೆ ರೂ. 1,76,83,680/– ಸಾಲ ಮನ್ನಾ ಯೋಜನೆಯನ್ನು ಯಶಸ್ವಿಯಾಗಿ ತಲುಪಿಸಿದೆ ಎನ್ನುತ್ತಾರೆ ಸಂಘದ ಅಧ್ಯಕ್ಷರಾದ ವಿರೂಪಾಕ್ಷಪ್ಪ ವಿ. ಕೊಕಟನೂರ ಅವರು.

ಸಂಘದ ಪ್ರಥಮ ಶಾಖೆಯನ್ನು ದಿನಾಂಕ : 15/11/2013 ರಂದು ಹುನ್ನೂರ ಗ್ರಾಮದಲ್ಲಿ ಪ್ರಾರಂಭ ಮಾಡಿದ್ದು, ಶಾಖೆಯು ದಿನಾಂಕ : 31/03/2022ಕ್ಕೆ ರೂ. 21,01,742–00 ಲಾಭ ಗಳಿಸಿದೆ. 2022ರ ಮಾರ್ಚ ಅಂತ್ಯಕ್ಕೆ ಶಾಖೆಯು ರೂ. 41,41,67,413–00 ವಾರ್ಷಿಕ ವಹಿವಾಟು, ರೂ. 12,29,41,167–00 ದುಡಿಯುವ ಬಂಡವಾಳ ಹೊಂದಿರುವುದು. ಸಂಘವು ಹುನ್ನೂರ ಗ್ರಾಮದಲ್ಲಿ ಸ್ವಂತ ನಿವೇಶನವನ್ನು ಹೊಂದಿದ್ದು ಶೀಘ್ರವೇ ನೂತನ ಕಟ್ಟಡವನ್ನು ಹೊಂದಲಿದೆ ಎಂದು ಅವರು ಸಹಕಾರ ಪತ್ರಿಕೆಗೆ ತಿಳಿಸಿದ್ದಾರೆ.

**ಸದಸ್ಯರಿಗೆ ನೀಡುತ್ತಿರುವ ವಿಶೇಷ ಸೌಲಭ್ಯಗಳು:**

- ಸಂಘವು ಅತ್ಯುತ್ತಮವಾದ ಪಿಗ್ಮಿ ಸಂಗ್ರಹಣೆಯನ್ನು ಹೊಂದಿದೆ.
- ಸಂಘವು ತನ್ನ ಗ್ರಾಹಕರಿಗೆ RTGS/NEFT ಸೌಲಭ್ಯಗಳನ್ನು ತ್ವರಿತಗತಿಯಲ್ಲಿ ನೀಡುತ್ತಿದೆ.
- ಸಂಘವು ಠೇವುಗಳ ಮೇಲೆ ಆಕರ್ಷಕ ಬಡ್ಡಿ ದರವನ್ನು ನೀಡುತ್ತಿದೆ.
- ಸಂಘವು ಶಿಕ್ಷಣ ನಿಧಿಯನ್ನು ಪ್ರತಿ ವರ್ಷ ನೀಡುತ್ತಾ ಬಂದಿದೆ.

**ನಿವ್ವಳ ಲಾಭ :** ಸಂಘವು 2021–22ನೇ ಸಾಲಿನಲ್ಲಿ ರೂ. 1,13,32,476.70 ಲಾಭ ಗಳಿಸಿದೆ. ಸಂಘವು ಈ ವರ್ಷ ಶೇ.20% ರಂತೆ ಡಿವಿಡೆಂಡ್ ವಿತರಿಸಿದೆ.

## ಆಡಳಿತ ಮಂಡಳಿ ಸದಸ್ಯರು


ದಿ. ರುದ್ರಪ್ಪ ಪ. ಮಂಡಿ
ಸಂಸ್ಥಾಪಕ ಅಧ್ಯಕ್ಷರು


ವಿರುಪಾಕ್ಷಪ್ಪ ವೀ. ಕೊಕಟನೂರ
ಅಧ್ಯಕ್ಷರು


ಹೇಮಲತಾ .ವೀ. ಪಟ್ಟಣ
ಉಪಾಧ್ಯಕ್ಷರು


ನಿಂಗಪ್ಪ ರಾ. ಹೊನವಾಡ
ನಿರ್ದೇಶಕರು


ದೇವೆಂದ್ರಪ್ಪ ವಿ. ಚನಪನ್ನವರ
ನಿರ್ದೇಶಕರು


ಚನವೀರಪ್ಪ ಜ. ಬಾಣಕಾರ
ನಿರ್ದೇಶಕರು


ರಾಜಕುಮಾರ ವೀ. ಬಾಣಕಾರ
ನಿರ್ದೇಶಕರು


ಮಲ್ಲಿಕಾರ್ಜುನ ಕಾ. ಮೊಳೆಗಾವಿ
ನಿರ್ದೇಶಕರು


ಮಹಾದೇವ ಗಂ. ಬಾಣಕಾರ
ನಿರ್ದೇಶಕರು


ದಾನಪ್ಪ ಕಾ. ಹುಲಜತ್ತಿ
ನಿರ್ದೇಶಕರು


ಕಾಡಪ್ಪ ಸಂ. ಹಳಿಂಗಳಿ
ನಿರ್ದೇಶಕರು


ಈಶ್ವರ ಕಾ. ಹಳ್ಯಾಳ
ನಿರ್ದೇಶಕರು


ದೇವೆಂದ್ರ ಮ. ಶೀಲವಂತ
ನಿರ್ದೇಶಕರು


ದ್ರಾಕ್ಷಾಯಣಿ ಜ. ಕುಲಗೋಡ
ನಿರ್ದೇಶಕರು


ಸಂಜಯ ನ. ಜವಳಗಿ
ಮುಖ್ಯಕಾರ್ಯನಿರ್ವಹಣಾಧಿಕಾರಿ

# ದಸರಾ : ನವದುರ್ಗೆಯರ ಶಕ್ತಿಗೆ ಶರಣು ಶರಣು



ದಸರಾ, ನವರಾತ್ರಿ, ದುರ್ಗಾ ಪೂಜೆ, ಶರನ್ನವರಾತ್ರಿ ಹೀಗೆ ಶಕ್ತಿ ದೇವತೆಯರಾದ ನವ ದುರ್ಗೆಯರನ್ನು ಒಂಬತ್ತು ದಿನಗಳ ಕಾಲ ಪೂಜಿಸುವ ಆಚರಣೆಗೆ ಕರ್ನಾಟಕದಲ್ಲಿ ನಾಡಹಬ್ಬ ದಸರಾ ಎಂದು ಉತ್ತರ ಭಾರತದಲ್ಲಿ ನವರಾತ್ರಿ ಉತ್ಸವ ಎಂದು ಪಶ್ಚಿಮ ಬಂಗಾಳದಲ್ಲಿ ದುರ್ಗಾ ಪೂಜೆ ಎಂದು ನಾನಾ ಹೆಸರಿನಿಂದ ಕರೆಯುತ್ತಾರೆ ಒಟ್ಟಾರೆಯಾಗಿ ನವ ದುರ್ಗೆಯರನ್ನು ಪೂಜಿಸಿ ದೇವಿಯ ಕೃಪೆಗೆ ಪಾತ್ರರಾಗುವುದೆ ಆಚರಣೆಯ ಮುಖ್ಯ ಉದ್ದೇಶ.

**ರಾಜ್ಯಾದ್ಯಂತ ವಿಭಿನ್ನ ರೀತಿಯಲ್ಲಿ ನವರಾತ್ರಿ ಆಚರಣೆ! :** ರಾಜ್ಯದಲ್ಲಿ ಇದನ್ನು ನಾಡಹಬ್ಬದಂತೆ ಆಚರಿಸಿಕೊಂಡು ಬರಲಾಗುತ್ತಿದೆ. ನವರಾತ್ರಿಯು ನಾಡಹಬ್ಬದ ರೂಪ ಪಡೆದು ದಸರಾ ಆಗಿದೆ. ದಸರಾ ಅಂದಕೂಡಲೇ ಮನಸ್ಸಿಗೆ ಬರುವುದು ಮೈಸೂರು ದಸರಾ. ಆದರೆ ರಾಜ್ಯದಲ್ಲಿ ಇನ್ನೂ ಹಲವೆಡೆ ಇದನ್ನು ಸಾಮೂಹಿಕ ಹಬ್ಬವಾಗಿ ಆಚರಿಸಲಾಗುತ್ತಿದೆ.

ಉಡುಪಿ ಜಿಲ್ಲೆ ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನ, ಉತ್ತರಕನ್ನಡ ಜಿಲ್ಲೆ, ಶಿರಸಿಯ ಶ್ರೀ ಮಾರಿಕಾಂಬಾ ದೇವಸ್ಥಾನ, ಕಟೀಲು ದಕ್ಷಿಣ ಕನ್ನಡ ಜಿಲ್ಲೆ ಮೂಲ್ಕಿಯ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ, ಬಂಟ್ವಾಳ, ಕರಿಯಂಗಳ ಗ್ರಾಮದ ದೇವಿ ಪೊಳಲಿ ಶ್ರೀ ರಾಜರಾಜೇಶ್ವರಿ ಸನ್ನಿದಿಯಲ್ಲಿ, ಚಿಕ್ಕಮಗಳೂರಿನ ಕಳಸ ಸಮೀಪದ ಹೊರನಾಡಿನ ಅನ್ನಪೂರ್ಣೇಶ್ವರಿ ದೇವಿ, ಶೃಂಗೇರಿಯ ಶಾರದಾಂಬೆ ದೇವಿ ದೇವಸ್ಥಾನ, ಬಾದಾಮಿಯ ಶಕ್ತಿ ದೇವತೆ ಬನಶಂಕರಿ ದೇವಿ ಶಿವಮೊಗ್ಗದ ಸಾಗರದ ಸಿಗಂದೂರು ಚೌಡೇಶ್ವರಿ ಹಾಗೂ ಸವದತ್ತಿಯ ಯಲ್ಲಮ್ಮನ ಗುಡ್ಡದಲ್ಲಿ ನವರಾತ್ರಿ ಉತ್ಸವ ಅತ್ಯಂತ ಸಡಗರ ಸಂಭ್ರಮದಿಂದ ನಡೆಯುತ್ತದೆ.

**5 ಶತಮಾನದ ಇತಿಹಾಸವುಳ್ಳ ಮೈಸೂರು ದಸರಾ :** ದಸರಾ ಹಬ್ಬ, ಮೈಸೂರಿನಲ್ಲಿ ಆರಂಭವಾಗುವುದಕ್ಕೆ ಮುಂಚೆಯೇ ಶ್ರೀರಂಗಪಟ್ಟಣದಲ್ಲಿ ಆಚರಿಸಲಾಗುತ್ತಿತ್ತು. ವಿಜಯನಗರ ಸಾಮ್ರಾಜ್ಯದ ಸಾಮಂತ ರಾಜ್ಯವಾಗಿದ್ದ ಶ್ರೀರಂಗಪಟ್ಟಣದಲ್ಲಿ ರಾಜ ಶ್ರೀರಂಗರಾಯ ಆಳ್ವಿಕೆ ನಡೆಸುತ್ತಿದ್ದ. ಹಾಗಾಗಿ ವಿಜಯನಗರದ ಆಳ್ವಿಕೆಗೊಳಪಟ್ಟಿದ್ದರಿಂದ ಅಲ್ಲಿನ ಆಚರಣೆಗಳು ಇಲ್ಲಿಯೂ ಅನುಸರಿಸುವುದು ಸಾಮಾನ್ಯವಾಗಿತ್ತು. 1610ರಲ್ಲಿ ಶ್ರೀರಂಗಪಟ್ಟಣದಲ್ಲಿ ಪ್ರಾರಂಭವಾದ ದಸರಾ ನವರಾತ್ರಿ ಉತ್ಸವ 1805ರಲ್ಲಿ ಯದುವಂಶದ ಅರಸರ ರಾಜಧಾನಿ ಮೈಸೂರಿಗೆ ಸ್ಥಳಾಂತರಗೊಂಡಿತು. ಇಲ್ಲಿ ಸಾಂಸ್ಕೃತಿಕ ಕಲೆಗಳ ಪ್ರದರ್ಶನ, ಸೇನೆಯ ಬಲಾಬಲ ಪರಿಚಯ, ನಾಡಿನ ಜನತೆಗೆ ರಾಜರ ದರ್ಶನ ಇತ್ಯಾದಿಗಳೆಲ್ಲವೂ ನಡೆಯುತ್ತಿದ್ದವು. ಇಂದು ಅಂದಿನ ವೈಭವ ಇಲ್ಲದಿದ್ದರೂ ಸರಳವಾಗಿ ಸಂಪ್ರದಾಯವನ್ನು ಪಾಲಿಸಿಕೊಂಡು ಬರಲಾಗುತ್ತಿದೆ.

**ಕೊಡಗು ದಸರಾ! :** ಕೊಡಗನ್ನು ಆಳಿದ ಹಾಲೇರಿ ವಂಶಸ್ಥರು ವಿಜಯದಶಮಿ ಆಚರಣೆಯನ್ನು ಮಾಡುತ್ತಿದ್ದರು. ಈ ಹಿಂದೆ ಕೊಡಗಿನಲ್ಲಿ ವಿವಿಧ ಮಾರಕ ಸಾಂಕ್ರಾಮಿಕ ರೋಗಗಳು ಕಾಣಿಸಿಕೊಂಡು ಸಾವು ನೋವುಗಳು ಸಂಭವಿಸಿತ್ತು. ಇದರಿಂದ ಚಿಂತಿತರಾದ ಅಂದಿನ ಅರಸರು, ಪರಿಹಾರಕ್ಕಾಗಿ ನಾಲ್ಕು ಶಕ್ತಿ ದೇವತೆಗಳಾದ ಮಾರಿಯಮ್ಮ ದೇವರಿಗೆ ಮೊರೆ ಹೋಗಿ ಕರಗಗಳ ನಗರ ಪ್ರದಕ್ಷಿಣೆ ಮಾಡಿಸಿದರು. ಇದಾದ ಬಳಿಕ ಸಾಂಕ್ರಮಿಕ ರೋಗ ಮರೆಯಾಯಿತು. ಹೀಗೆ ಮಡಿಕೇರಿ ದಸರಾ ಆರಂಭವಾಯಿತು.

**ಮಂಗಳೂರಲ್ಲಿ ನವದುರ್ಗೆಯರ ಆರಾಧನೆ :** ವಿಶ್ವವಿಖ್ಯಾತ ಮೈಸೂರು ದಸರಾ ಮಾದರಿಯಲ್ಲೇ ಮಂಗಳೂರಿನ ಕುದ್ರೋಳಿ ಗೋಕರ್ಣನಾಥೇಶ್ವರ ದೇವಸ್ಥಾನದ ನವರಾತ್ರಿಯ ನವದುರ್ಗಾರಾಧನೆ 'ಮಂಗಳೂರು ದಸರಾ' ನಾಡಿನ ಮೈಮನ ಸೂರೆಗೊಳ್ಳುತ್ತದೆ.

ಶಾರದಾ ಮೂರ್ತಿಯ ವಿಸರ್ಜನೆಯ ದಸರಾ ಮೆರವಣಿಗೆ ಹೊರತುಪಡಿಸಿ ಉಳಿದ ದಿನಗಳಲ್ಲಿ ಧಾರ್ಮಿಕ ಹಾಗೂ ಸಾಂಸ್ಕೃತಿಕ



ಕಾರ್ಯಕ್ರಮಗಳು ಪ್ರತಿವರ್ಷದಂತೆ ನಡೆಯುತ್ತದೆ.

**ಹಂಪಿಯಲ್ಲಿ ಐತಿಹಾಸಿಕ ಬನ್ನಿ ಮಹೋತ್ಸವ :** ವಿಜಯನಗರ ಸಾಮ್ರಾಜ್ಯದ ಕಾಲದಲ್ಲೇ ಹಂಪಿ ಪ್ರದೇಶದಲ್ಲಿ ದಸರಾ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿತ್ತು. ಆ ಪರಂಪರೆಯನ್ನು ಈಗಲೂ ವಾಲ್ಮೀಕಿ ನಾಯಕ ಸಮಾಜ ಮುಂದುವರಿಸಿಕೊಂಡು ಬರುತ್ತಿದೆ. ಶ್ರೀಕೃಷ್ಣದೇವರಾಯರ ಕಾಲದಲ್ಲಿ ಸೋಲರಿಯದ ಏಳು ಸಾವಿರ ಸೈನಿಕರವುಳ್ಳ ಬೇಡರ ಪಡೆಯಿತ್ತು. ಆ ಬೇಡರ ವಂಶಸ್ಥರೇ ಇಂದಿಗೂ ದಸರಾ ಹಬ್ಬವನ್ನು ಆಚರಿಸಿಕೊಂಡು ಬರುತ್ತಿದ್ದಾರೆ. ಹೊಸಪೇಟೆಯ ಧರ್ಮದ ಗುಡ್ಡದಲ್ಲಿ ದೇವರ ಬನ್ನಿಯನ್ನು ಮುಡಿಯಲಾಗುತ್ತದೆ. ಹೊಸಪೇಟೆಯ ಏಳುಕೇರಿ, ಕಮಲಾಪುರದ ಏಳುಕೇರಿ ಮತ್ತು ನಾಗೇನಹಳ್ಳಿ, ಬಸವನದುರ್ಗ ಸೇರಿದಂತೆ ವಿವಿಧ ಹಳ್ಳಿಗಳಲ್ಲಿ ಶಕ್ತಿ ದೇವತೆಗಳನ್ನು ದೇವರ ಗುಡಿಗಳಲ್ಲಿ ಪ್ರತಿಷ್ಠಾಪಿಸಿ 9 ದಿನಗಳವರೆಗೆ ಪೂಜಿಸಲಾಗುತ್ತದೆ. ಆನಂತರ ನಗರಕ್ಕೆ ಆಗಮಿಸಿ ಇಡೀ ದಿನ ಭಜನೆ, ಕೋಲಾಟ ನಡೆಯುತ್ತದೆ. ಮಾರನೇ ದಿನ ಊರಬನ್ನಿ ನಡೆಯುತ್ತದೆ.

**ರಂಭಾಪುರಿ, ಶೃಂಗೇರಿಯಲ್ಲಿ ಸಂಭ್ರಮದ ಶರನ್ನವರಾತ್ರಿ :** ಚಿಕ್ಕಮಗಳೂರು ಜಿಲ್ಲೆಯ ರಂಭಾಪುರೀ ಪೀಠ ಹಾಗೂ ಶೃಂಗೇರಿ ಪೀಠದಲ್ಲಿ ಶರನ್ನವರಾತ್ರಿ ಆಚರಣೆ ಮಾಡಲಾಗುತ್ತಿದೆ. ಶೃಂಗೇರಿಯಲ್ಲಿ ಶ್ರೀ ಶಾರಾದಾಂಬೆಗೆ 9 ದಿನ ವಿಶೇಷ ಅಲಂಕಾರ ಮಾಡಲಾಗುವುದು. ಕೊನೆಯ ದಿನ ಶೃಂಗೇರಿಯ ರಾಜಬೀದಿಯಲ್ಲಿ ರಥೋತ್ಸವ, ಅಡ್ಡಪಲ್ಲಕ್ಕಿ ಉತ್ಸವ ನಡೆಯಲಿದೆ. ಬಾಳೆಹೊನ್ನೂರಿನ ರಂಭಾಪುರೀ ಪೀಠದಲ್ಲೂ ದಸರಾ ಮಹೋತ್ಸವವನ್ನು ಶ್ರದ್ಧಾ ಭಕ್ತಿಯಿಂದ ಆಚರಿಸಲಾಗುತ್ತದೆ.

**ಮೈಸೂರಿನಂತೆ ಶಿವಮೊಗ್ಗದಲ್ಲೂ ಜಂಬೂ ಸವಾರಿ :** ಮೈಸೂರಿನಂತೆ ಶಿವಮೊಗ್ಗದಲ್ಲೂ ಚಾಮುಂಡೇಶ್ವರಿ ದೇವಿಗೆ ಪೂಜೆ ಸಲ್ಲಿಸಿ ದಸರಾಕ್ಕೆ ಚಾಲನೆ ನೀಡಲಾಗುತ್ತದೆ. 9 ದಿನಗಳ ಕಾಲ ನಡೆಯುವ ದಸರಾ ಆಚರಣೆಯಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ರೈತ ದಸರಾ, ಮಹಿಳಾ ದಸರಾ, ಪರಿಸರ ದಸರಾ, ಕಲಾ ದಸರಾ, ಯುವ ದಸರಾ, ಆಹಾರ ದಸರಾ, ಸಾಂಸ್ಕೃತಿಕ ದಸರಾ, ಮಕ್ಕಳ ದಸರಾ, ಕ್ರೀಡಾ ದಸರಾ ಹೀಗೆ ಹಲವು ವೈವಿಧ್ಯಮಯ ಕಾರ್ಯಕ್ರಮಗಳು ನಡೆಯುತ್ತವೆ. ವಿಜಯದಶಮಿಯಂದು ಅಂಬಾರಿಯ ಮೇಲೆ ದೇವಿಯ ಮೆರವಣಿಗೆ ಮಾಡಲಾಗುತ್ತದೆ. ಜಂಬೂ ಸವಾರಿ ಬನ್ನಿಮಂಟಪಕ್ಕೆ ತೆರಳಿ ಬನ್ನಿ ಕಡಿಯುವುದರೊಂದಿಗೆ ದಸರಾ ಮುಗಿಯುತ್ತದೆ. ನಂತರ ರಾವಣ ಸಂಹಾರ ಆಗುತ್ತಿದ್ದಂತೆ ಚಿತ್ತಾಕರ್ಷಕ ಪಟಾಕಿಗಳನ್ನು ಸಿಡಿಸಿ



ಸಾರ್ವಜನಿಕರಿಗೆ ಮನರಂಜನೆ ನೀಡಲಾಗುತ್ತದೆ.

**ದಾಂಡೇಲಿಯಲ್ಲಿ ರಾಮಲೀಲಾ ಉತ್ಸವ :** ಉತ್ತರ ಕನ್ನಡದ ದಾಂಡೇಲಿಯಲ್ಲಿ ಕಳೆದ ಆರು ದಶಕಗಳಿಂದ ದಸರಾ ಪ್ರಯುಕ್ತ ರಾಮಲೀಲಾ ಉತ್ಸವ ಆಚರಿಸಲಾಗುತ್ತಿದೆ. ದುಷ್ಟಶಕ್ತಿಗಳ ಪ್ರತೀಕವಾದ ಅಸುರರ ಪ್ರತಿಕೃತಿಗಳನ್ನು ದಹಿಸುವುದು ಇಲ್ಲಿನ ವಿಶೇಷತೆ. ಸುಮಾರು 50 ಅಡಿ ಎತ್ತರದ ರಾವಣ, 45 ಅಡಿ ಎತ್ತರದ ಕುಂಭಕರ್ಣ ಮತ್ತು 30 ಅಡಿ ಎತ್ತರದ ಮೇಘನಾದನ ಪ್ರತಿಕೃತಿಗಳನ್ನು ದಹಿಸುತ್ತಿದ್ದಂತೆ ದಾಂಡೇಲಿಯ ದಸರಾಕ್ಕೆ ತೆರೆಬೀಳುತ್ತದೆ. ಸಿಡಿಮದ್ದುಗಳ ಪ್ರದರ್ಶನ ಜನತೆಗೆ ಇನ್ನಷ್ಟುರಂಜನೆ ಒದಗಿಸುತ್ತದೆ. ದಾಂಡೇಲಿ ಕಾಗದ ಕಾರ್ಖಾನೆಗೆ ಉದ್ಯೋಗಿಗಳು, ಕಾರ್ಮಿಕರಾಗಿ ಉತ್ತರ ಭಾರತದಿಂದ ಬಂದವರು ತಮ್ಮ ಜತೆ ರಾಮಲೀಲಾ ಉತ್ಸವ, ದಾಂಡಿಯಾವನ್ನೂ ತಂದರು. ಕೊರೋನಾ ಪೂರ್ವ ಕಾಲದಲ್ಲಿ ಸುಮಾರು 50 ಸಾವಿರಕ್ಕೂ ಅಧಿಕ ಮಂದಿ ಈ ವೈಭವವನ್ನು ಕಣ್ತುಂಬಿಕೊಳ್ಳುತ್ತಿದ್ದಾರೆ.

**ಭಾರತದ ಇತರೆಡೆಗಳಲ್ಲಿ ದಸರಾ :** ಇದೇ ಹಬ್ಬವನ್ನು ಭಾರತದ ಉತ್ತರ ಭಾಗಗಳಲ್ಲಿ 'ದಶೇರ'ವಾಗಿಯೂ, 'ದುರ್ಗಾ ಪೂಜೆ'ಯಾಗಿಯೂ ಆಚರಿಸುತ್ತಾರೆ. 9 ದಿನಗಳ ಈ ಹಬ್ಬಕ್ಕೆ 'ನವರಾತ್ರಿ' ಎಂಬ ಹೆಸರೂ ಇದೆ. ಆಯುಧ ಪೂಜೆ, ವಿಜಯ ದಶಮಿಗಳನ್ನೊಳಗೊಂಡ ಹಲವು ದಿನಗಳ ಹಬ್ಬದಾಚರಣೆ ಕರ್ನಾಟಕದಲ್ಲಿ, ಅದರಲ್ಲೂ ಮೈಸೂರು ಪ್ರಾಂತ್ಯದಲ್ಲಿ ವಿಶೇಷವಾಗಿ ಆಚರಿಸಲಾಗುತ್ತದೆ. ಬಂಗಾಳದಲ್ಲಿ ಈ ಸಮಯದಲ್ಲಿ ದುರ್ಗೆಯ ಪೂಜೆ ಬಹಳ ವಿಜೃಂಭಣೆಯಿಂದ ನಡೆಯುತ್ತದೆ. ಸಾರ್ವಜನಿಕವಾಗಿ ದೇವಿ ಪೂಜೆಯನ್ನು ನಡೆಸುವ ಪರಿಪಾಠವೂ ಇದೆ. ಸಿಂಹದ ಮೇಲೆ ಕುಳಿತು ವಿವಿಧ ಬಗೆಯ ಆಯುಧಗಳನ್ನು ಹಿಡಿದಿರುವ ದೇವಿಯ ದೊಡ್ಡ ಮೂರ್ತಿಯನ್ನು ಇರಿಸಿ ಬೆಳಗ್ಗೆ ಸಂಜೆಗಳಲ್ಲಿ ಪೂಜೆ ಭಜನೆಗಳನ್ನು ಅರ್ಪಿಸುತ್ತಾರೆ. ಒಂಭತ್ತೂ ದಿನಗಳು ಒಂಭತ್ತು ರೂಪದಲ್ಲಿ ದೇವಿಯನ್ನು ಆರಾಸುತ್ತಾರೆ. ಅವುಗಳೆಂದರೆ ಶೈಲಪುತ್ರಿ, ಬ್ರಹ್ಮಚಾರಿಣಿ, ಚಂದ್ರಘಂಟಾ, ಕೂಷ್ಮಾಂಡ, ಸ್ಕಂದಮಾತಾ, ಕಾತ್ಯಾಯನಿ, ಕಾಳರಾತ್ರಿ, ಮಹಾಗೌರಿ ಮತ್ತು ಸಿದ್ಧಿಧಾತ್ರಿ.

ಮಹಿಳಾ ಶಕ್ತಿಯನ್ನು, ಮಾತೆಯರನ್ನು ಪೂಜಿಸುವ ಗೌರವಿಸುವ, ಆರಾಧಿಸುವ ನವರಾತ್ರಿ ಉತ್ಸವ ಆಚರಣೆಯ ಮೂಲ ಉದ್ದೇಶ ನಾಡಿಗೆ ಶಾಂತಿ, ಸೌಹಾರ್ದತೆ, ಪ್ರೀತಿ, ಭಾತೃತ್ವದ ಭಾವನೆಯನ್ನು ಇನ್ನಷ್ಟು ಗಟ್ಟಿಗೊಳಿಸುವುದೆ ಆಗಿದೆ.

**– ಮಂಜುನಾಥ್ ನಾಯ್ಕ್**
**ಹಿರಿಯ ಪತ್ರಕರ್ತರು, ಬೆಂಗಳೂರು.**

# ಪರಿಸರ ಸ್ನೇಹಿ ದೀಪಾವಳಿ ಆಚರಿಸೋಣ



ಹಿಂದೂಗಳ ದೊಡ್ಡ ಹಬ್ಬ ಎಂದರೆ ದೀಪಾವಳಿ. ಇದನ್ನು ಬೆಳಕಿನ ಹಬ್ಬ ಎಂದೂ ಕರೆಯುತ್ತಾರೆ. ದೀಪಾವಳಿ ಹಬ್ಬವನ್ನು ಭಾರತ ಮತ್ತು ವಿದೇಶಗಳಲ್ಲಿ ಇರುವ ಹಿಂದೂ ಸಮುದಾಯದವರು ಅತ್ಯಂತ ವಿಜೃಂಭಣೆಯಿಂದ ಆಚರಿಸುತ್ತಾರೆ. ಆದರೆ ಇತ್ತೀಚಿನ ವರ್ಷಗಳಲ್ಲಿ ದೀಪಾವಳಿಯ ಪಟಾಕಿ ಸಿಡಿತದ ಆರ್ಭಟದಿಂದ ಹೆಚ್ಚುತ್ತಿರುವ ಶಬ್ದಮಾಲಿನ್ಯ ಹಾಗೂ ವಾಯುಮಾಲಿನ್ಯದಿಂದ ದೊಡ್ಡ ಸುದ್ದಿಯಾಗುತ್ತದೆ. ಹಬ್ಬ ಆಚರಣೆ ಜೊತೆಗೆ ಪರಿಸರ ರಕ್ಷಣೆಗೂ ಒತ್ತು ನೀಡಬೇಕು ಎಂಬ ಕೂಗು ಪರಿಸರವಾದಿಗಳಿಂದ ಕೇಳಿಬರುತ್ತಿದೆ.

ಈ ಹಬ್ಬದಲ್ಲಿ ಹೊಡೆಯುವ ಪಟಾಕಿಗಳು ವಾಯು ಮತ್ತು ಶಬ್ದಮಾಲಿನ್ಯ ಉಂಟು ಮಾಡುತ್ತದೆ, ರಾಸಾಯನಿಕ ವಸ್ತುಗಳನ್ನು ಮಿಶ್ರ ಮಾಡಿರುವ ರಂಗೋಲಿಗಳು ಮಣ್ಣನ್ನು ಕಲುಷಿತಗೊಳಿಸುತ್ತವೆ ಹಾಗೂ ಅಲಂಕಾರಕ್ಕೆ ಬಳಸುವ ಪ್ಲಾಸ್ಟಿಕ್ ವಸ್ತುಗಳೂ ಪರಿಸರಕ್ಕೆ ಪೂರಕವಾಗಿಲ್ಲ. ಆದ್ದರಿಂದ ಪ್ರತಿಯೊಬ್ಬರು ಕೂಡಾ ಸಾಧ್ಯವಾದಷ್ಟು ಈ ಆಚರಣೆಗಳನ್ನು ಪರಿಸರ ಸ್ನೇಹಿಯಾಗಿ ಮತ್ತು ಸುರಕ್ಷಿತವಾಗಿ ಆಚರಿಸಬೇಕು ಎಂಬುದು ಪರಿಸರವಾದಿಗಳ ಒತ್ತಾಯವಾಗಿದೆ.

**ನೈಸರ್ಗಿಕ ಆಚರಣೆಗೆ ಒತ್ತು :** ಸುಂದರವಾದ ರಂಗೋಲಿಗಳು ಹಬ್ಬದ ಕಳೆಯನ್ನು ಹೆಚ್ಚಿಸುತ್ತವೆ. ಆದರೆ ರಂಗೋಲಿಗೆ ಬಳಸುವ ವಿಷಕಾರಿ ಕೃತಕ ಪುಡಿಗಳಿಗೆ ನೋ ಎನ್ನಿ. ಸಾಧ್ಯವಾದಷ್ಟು ನೈಸರ್ಗಿಕ ವಸ್ತುಗಳಿಂದ ಮಾಡಿದ ರಂಗೋಲಿ ಪುಡಿಗಳನ್ನು ಬಳಸಿ ಎನ್ನುತ್ತಾರೆ ಗೃಹಿಣಿ ಸುಜಾತ.

ರಂಗೋಲಿಗೆ ನೈಸರ್ಗಿಕ ಪುಡಿಗಳನ್ನೇ ಬಳಸಿ ಅಂದರೆ ಹಳದಿ ಬಣ್ಣಕ್ಕೆ ಅರಶಿಣವನ್ನು, ಬಿಳಿ ಬಣ್ಣಕ್ಕೆ ಅಕ್ಕಿ ಹಿಟ್ಟನ್ನು, ಕಂದು ಬಣ್ಣಕ್ಕೆ ಕಾಫಿ ಪುಡಿ ಮತ್ತು ಕೆಂಪು ಬಣ್ಣಕ್ಕೆ ಕುಂಕುಮವನ್ನು ಬಳಸುವುದು ಉತ್ತಮ. ವರ್ಣರಂಜಿತ ನೈಸರ್ಗಿಕ ಲುಕ್‌ಗೆ ಹೂವಿನ ಪಕಳೆಗಳು ಮತ್ತು ಎಲೆಗಳನ್ನು ಬಳಸುವುದು ಒಳ್ಳೆಯದು ಇಂಥ ರಂಗೋಲಿಗಳು ನೋಡಲು ಕೂಡಾ ಚೆನ್ನಾಗಿರುತ್ತವೆ. ಹಬ್ಬ ಮುಗಿದ ಮೇಲೆ ಇವುಗಳನ್ನು ಸುಲಭವಾಗಿ ತೆಗೆದು ಕಾಂಪೋಸ್ಟ್ ಬಿನ್‌ಗೆ ಹಾಕಬಹುದು ಎಂದು ಸುಜಾತ ಸಲಹೆ ನೀಡಿದ್ದಾರೆ.

**ಪ್ಲಾಸ್ಟಿಕ್ ಬಳಕೆ ಬೇಡ :** ದೀಪಾವಳಿಗೆ ಹೆಚ್ಚಿನವರು ಪ್ಲಾಸ್ಟಿಕ್‌ನಿಂದ ಮಾಡಿದ ಅಲಂಕಾರಿಕ ವಸ್ತುಗಳನ್ನು ಬಳಸುತ್ತಾರೆ. ಪ್ಲಾಸ್ಟಿಕ್‌ನ ಹೂವು, ಬೌಲ್, ತೋರಣ, ಪ್ಲಾಸ್ಟಿಕ್‌ನ ಗಿಫ್ಟ್ ಐಟಂ ಇತ್ಯಾದಿಗಳು. ಪ್ಲಾಸ್ಟಿಕ್‌ಮಯವಾಗಿರುತ್ತವೆ. ಆದರೆ ಈ ಪ್ಲಾಸ್ಟಿಕ್‌ಗಳು ಮಣ್ಣಿನಲ್ಲಿ ಕರಗುವುದಿಲ್ಲ. ಪರಿಸರಕ್ಕೆ ಹಾನಿಯುಂಟು ಮಾಡುವ ಇಂಥ ಕೃತಕ ಅಲಂಕಾರಿಕಾ ವಸ್ತುಗಳಿಂದ ದೂರವಿರಿ. ಹೂವು, ಎಲೆ, ಮಣ್ಣಿನ ಕಲಾಕೃತಿಗಳು ಮುಂತಾದ ನೈಸರ್ಗಿಕ ಅಲಂಕಾರಿಕ ವಸ್ತುಗಳನ್ನು ಬಳಸಿ. ಕೆಲವರು ಅತಿಥಿಗಳಿಗೆ ಡಿಸ್ಪೋಸೇಬಲ್ ಪ್ಲಾಸ್ಟಿಕ್ ಪ್ಲೇಟ್‌ಗಳಲ್ಲಿ ಊಟ ಬಡಿಸುತ್ತಾರೆ. ಇದಕ್ಕಿಂತ ಎಲೆಯಿಂದ ಮಾಡಿದ ನ್ಯಾಚುರಲ್ ಪ್ಲೇಟ್‌ಗಳಲ್ಲಿ ಊಟ ನೀಡಿದರೆ ಉತ್ತಮ.

**ಪಟಾಕಿಗೆ ಪರ್ಯಾಯ ಹಸಿರು ಪಟಾಕಿ :** ವಿವಿಧ ರೀತಿಯ ಪಟಾಕಿಗಳು ಪರಿಸರಕ್ಕೆ ತೀರಾ ಹಾನಿಯನ್ನುಂಟು ಮಾಡುತ್ತವೆ. ಇದರ ಹೊಗೆ ಮತ್ತು ರಾಸಾಯನಿಕ ವಸ್ತು ಬೆರೆತ ದಪ್ಪ ಕಾಗದಗಳು ಪರಿಸರಕ್ಕೆ ಒಳ್ಳೆಯದಲ್ಲ. ಆದ್ದರಿಂದ ಪಟಾಕಿಗೆ ನೋ ಎಂದರೆ ಒಳ್ಳೆಯದು. ಇದರ ಬದಲು ದೀಪಗಳನ್ನು ಬೆಳಗಿಸಿ. ಪಟಾಕಿ ಹೊಡೆಯಲೇ ಬೇಕಿದ್ದರೆ ಪುನರ್ ಬಳಕೆಗೆ ಯೋಗ್ಯವಾದ ಪೇಪರ್‌ಗಳಿಂದ ಮಾಡಿದ ಇಕೊ ಫ್ರೆಂಡ್ಲಿ ಪಟಾಕಿಗಳನ್ನು ಸಿಡಿಸಿ. ಅತ್ಯಂತ ಕಡಿಮೆ ಪ್ರಮಾಣದಲ್ಲಿ ಪಟಾಕಿ ಖರೀದಿಸಿ.

**ಮಣ್ಣಿನ ಹಣತೆ ಬೆಳಗಿಸಿ :** ಹಬ್ಬಕ್ಕೆ ಬಣ್ಣ ಬಣ್ಣದ ಕ್ಯಾಂಡಲ್‌ಗಳನ್ನು ಬೆಳಗಿಸುವುದಕ್ಕಿಂತ ಮಣ್ಣಿನ ಹಣತೆಯಲ್ಲಿ ಎಣ್ಣೆ ಹಾಕಿ ದೀಪ ಬೆಳಗಿಸಿ. ಮಣ್ಣಿನ ಹಣತೆಗಳನ್ನು ಮತ್ತೆ ಮತ್ತೆ ಬಳಸಬಹುದು. ಇದನ್ನು ಪರಿಸರ ಸ್ನೇಹಿ ವಸ್ತುಗಳಿಂದಲೇ ತಯಾರಿಸಲಾಗುತ್ತದೆ. ಇದೇ ರೀತಿ ತೀಕ್ಷ್ಣವಾದ ರಾಸಾಯನಿಕ ಬಣ್ಣಗಳನ್ನು ಹಚ್ಚಿದ ಹಣತೆಗಳನ್ನು ಕೊಳ್ಳಬೇಡಿ. ಪೆಟ್ರೋಲಿಯಂ ಬಳಸಿ ಮಾಡುವ ಕ್ಯಾಂಡಲ್‌ಗಳು ವಿಷಕಾರಿ ವಸ್ತುಗಳನ್ನು ವಾತಾವರಣಕ್ಕೆ ಬಿಡುಗಡೆ ಮಾಡುತ್ತವೆ. ಇವುಗಳಿಗೂ ನೋ ಎನ್ನಿ. ಮನೆ ಮುಂದೆ ತೂಗು ಹಾಕುವ ಆಕಾಶಬುಟ್ಟಿಯೂ ಪರಿಸರ ಸ್ನೇಹಿಯಾಗಿರಲಿ. ಪುನರ್ ಬಳಕೆಗೆ ಯೋಗ್ಯವಾದ ಕಾಗದದಿಂದ ತಯಾರಿಸಿದ ಆಕಾಶಬುಟ್ಟಿಯನ್ನೇ ಬಳಸಿದರೆ ಉತ್ತಮ.

ಸಡಗರ ಸಂಭ್ರಮದಿಂದ ಹಾಗೂ ಸಂತೋಷದಿಂದ ಕೂಡಿದ ಬೆಳಕಿನ ಹಬ್ಬವನ್ನು ಆಚರಿಸುವ ಪ್ರತಿಯೊಬ್ಬರು ಪರಿಸರ ರಕ್ಷಣೆಗೆ ಆದ್ಯತೆ ನೀಡಿದರೆ ಪರಿಸರ ಹಾಗೂ ಪರಿಸರದಲ್ಲಿರು ಜೀವ ಜಂತು, ಪ್ರಾಣಿ ಪಕ್ಷಿಗಳು ಗಿಡ ಮರಗಳ ರಕ್ಷಣೆ ಆದ್ಯತೆ ನೀಡಿದಂತಾಗುತ್ತದೆ ಅಲ್ಲದೆ ಹಬ್ಬ ವನ್ನು ಅರ್ಥಪೂರ್ಣವಾಗಿ ಆಚರಿಸಿದಂತಾಗುತ್ತದೆ.

**– ಸವಿತಾ ನಾಯ್ಕ್**



# ಸಹಕಾರ ಸಂಘಗಳಲ್ಲಿ 'ಸಹಕಾರ ಮೌಲ್ಯ'ಗಳ ಪಾಲನೆಯ ಅಗತ್ಯತೆ

▶▶ **ಶಶಿಧರ ಎಲೆ,** ನಿವೃತ್ತ ಅಪರ ನಿಬಂಧಕರು

ಸಹಕಾರ ಸಂಘಗಳು ಆರಂಭವಾದದ್ದು 19ನೇ ಶತಮಾನದ ಮಧ್ಯದಲ್ಲಿ, 'ಕೈಗಾರಿಕೆ ಕ್ರಾಂತಿ'ಯ ಫಲವಾಗಿ ಉಂಟಾದ ಪಲ್ಲವಗಳಲ್ಲಿ 'ಸಹಕಾರ ಕ್ರಾಂತಿ' ಚಳುವಳಿಯೂ ಒಂದು. ಕೈಗಾರಿಕೆ ಕಾರ್ಮಿಕರ ಶ್ರಮವನ್ನು ಅವಲಂಭಿಸಿತ್ತು. ಆದರೆ ಅದಕ್ಕೆ ತಕ್ಕ ಪ್ರತಿಫಲ ದೊರೆಯದಿದ್ದಾಗ ಅವರು ತಮ್ಮ ಬದುಕಿನ ಅವಶ್ಯಕತೆಗೆ ಅವರು ಕಂಡುಕೊಂಡ ಮಾರ್ಗ ಸಹಕಾರ ಮಾರ್ಗ. ಇಂಗ್ಲೆಂಡ್‌ನ ಮ್ಯಾಚೆಸ್ಟರ್ ಪಟ್ಟಣದ ಟೋಡ್ ಲೇನ್‌ನಲ್ಲಿ ಕಾರ್ಮಿಕರು ಸಂಘಟಿತಗೊಂಡು ಸಹಕಾರ ಸಂಘ ಸ್ಥಾಪಿಸಿದರು. ಅವರೇ 'ರಾಕ್ ಡೇಲ್ ಅಗ್ರಗಾಮಿಗಳು' (Roch dale pioneers). ಇವರು ತಮ್ಮ ಸಹಕಾರ ಸಂಘವನ್ನು ನಡೆಸಲು ತಾವೇ ಕೆಲವೊಂದು ನೀತಿ ನಿಯಮಗಳನ್ನು ರಚಿಸಿಕೊಂಡರು. ಈ ನೀತಿ ನಿಯಮಗಳೇ ಕಾಲಕ್ರಮೇಣ 'ಸಹಕಾರ ತತ್ವ' ಗಳಾದವು. ಅಂತರ ರಾಷ್ಟ್ರೀಯ ಮೈತ್ರಿ ಸಂಸ್ಥೆ (International cooperative Alliance ICA) ಈ ತತ್ವಗಳನ್ನು ಅನುಸರಿಸುವಂತೆ ವಿಶ್ವದ ಸಹಕಾರ ಚಳುವಳಿಗೆ ದಿಕ್ಸೂಚಿಯಾಗಿ ನೀಡಿದೆ. ಕಾಲಕಾಲಕ್ಕೆ ತಕ್ಕಂತೆ ಅದರ ಬದಲಾವಳಿಗಳನ್ನು ಮಾಡುತ್ತಾ ಬಂದಿದೆ. ಪ್ರಸ್ತುತ 1994ರ ಸಮ್ಮೇಳನದಲ್ಲಿ ಅಳವಡಿಸಿಕೊಂಡ ಏಳು (7) ತತ್ವಗಳನ್ನು ಪಾಲಿಸಲಾಗುತ್ತಿದೆ. ಅದರಂತೆ ಸಹಕಾರ ಕಾಯ್ದೆ' ಕಾನೂನು, ಉಪ ನಿಯಮಗಳು, ವ್ಯವಹಾರಗಳು ನಡೆಯುವ ಅವಶ್ಯಕತೆ ಸಹಕಾರ ಚಳುವಳಿ ದೃಷ್ಟಿಯಿಂದ ಅತಿ ಅವಶ್ಯ. ಇದೇ ಸಮ್ಮೇಳನವು ಸಹಕಾರ ಸಂಘಗಳ ಅಭ್ಯುದಯಕ್ಕೆ ಮತ್ತು ಒಟ್ಟಾರೆ ಸಹಕಾರ ಚಳುವಳಿಯ ಉತ್ತಮ ಬೆಳವಣಿಗೆ ದೃಷ್ಟಿಯಿಂದ ನಾಲ್ಕು 'ಸಹಕಾರ ಮೌಲ್ಯ'ಗಳನ್ನು ಪಾಲಿಸಲು ಪ್ರತಿಪಾದಿಸಿತು.

**ಈ 'ಸಹಕಾರ ಮೌಲ್ಯ'ಗಳು ಈ ಕೆಳಕಂಡಂತಿವೆ**

1) ಸ್ವಸಹಾಯ ಮತ್ತು ಪರಸ್ಪರ ಸಹಾಯ.
   Selfhelp and mutual help.
2) ಸ್ವಯಂ ಜವಾಬ್ದಾರಿ. Self responsiblity.
3) ಪ್ರಜಾಪ್ರಭುತ್ವ. Democracy.
4) ಸಮಾನತೆ, ಬಂಡವಾಳ, ಮತ್ತು ಒಗ್ಗಟ್ಟು. Equality, Equity and solidarity.

ಈ ಮೌಲ್ಯಗಳನ್ನು ಅರ್ಥಮಾಡಿಕೊಂಡು ಸಹಕಾರ ಸಂಘದ ಭಾಗಿದಾರರೆಲ್ಲರೂ ಅಳವಡಿಸಿಕೊಂಡು ಆಚರಣೆಗೆ ತಂದು ಅನುಷ್ಠಾನಗೊಳಿಸಿದ್ದೇ ಆದಲ್ಲಿ ಸಹಕಾರ ಸಂಘಗಳು ಯಶಸ್ವಿಯಾಗಿ ಕಾರ್ಯಚರಣೆಗೊಳ್ಳುವುದಲ್ಲದೇ ಸಹಕಾರ ಚಳುವಳಿಯು ತನ್ನ ಅಂತಿಮ ಗುರಿಯಾದ ಸದಸ್ಯರ ಆರ್ಥಿಕ ಪ್ರಗತಿ, ಸಾಮಾಜಿಕ ಏಳ್ಗೆ, ಸಾಂಸ್ಕೃತಿಕ ಅಭಿವೃದ್ಧಿಯಾಗಲು ಕಾರಣವಾಗುತ್ತದೆ. ಈ ದೃಷ್ಟಿಯಿಂದ ಪ್ರತಿಯೊಂದು ಮೌಲ್ಯವನ್ನು ವಿಶ್ಲೇಷಿಸಿ ಅರ್ಥ ಮಾಡಿಕೊಂಡು ಅಳವಡಿಸಿಕೊಂಡಲ್ಲಿ ಸಹಕಾರ ಸಂಘದ ಸರ್ವತೋಮುಖ ಅಭಿವೃದ್ಧಿಗೆ ಕಾರಣವಾಗುತ್ತದೆ. ಈ ಮೌಲ್ಯಗಳನ್ನು 'ಸಹಕಾರ ಸಂಘ'ದ ಭಾಗೀದಾರರುಗಳಾದ (1) ಸದಸ್ಯರು (2) ಆಡಳಿತ ಮಂಡಳಿ (3) ಸಿಬ್ಬಂದಿ ವರ್ಗದವರು ಪಾಲಿಸಬೇಕಾಗುತ್ತದೆ.

**(1) ಸ್ವಸಹಾಯ ಮತ್ತು ಪರಸ್ಪರ ಸಹಾಯ :** ಸಹ+ಕಾರ=ಸಹಕಾರ, ಯಾವುದೇ ಕಾರ್ಯವನ್ನು ಒಬ್ಬರು ಮಾಡಲಾಗುವುದಲ್ಲಿ ಮೋ ಆ ಕಾರ್ಯವನ್ನು ಎಲ್ಲರೂ ಒಟ್ಟುಗೂಡಿ ಮಾಡುವುದೇ ಸಹಕಾರ. ತನ್ನ ಸ್ವಯಂ ಅಭಿವೃದ್ಧಿಗೆ ತಾನು ಶ್ರಮಿಸಬೇಕು ಜೊತೆ ಜೊತೆಗೆ ಇತರರನ್ನು ತನ್ನೊಡನೆ ಇತರರನ್ನು ಒಳಗೊಳ್ಳಬೇಕು. ತನಗೆ ತಾನು ಸಹಾಯ ಮಾಡಿಕೊಳ್ಳುವುದಲ್ಲದೇ ತನ್ನೊಡನೆ ಇರುವ, ತನ್ನಂತೆ ಇರುವ ಇತರೆ ಸದಸ್ಯರಿಗೆ ಕೂಡ ತಾನು ಅನುಸರಿಸಿದ ರೀತಿ, ನೀತಿ, ಮಾರ್ಗೋಪಾಯಗಳನ್ನು ತೋರಿಸಿ ಕೊಡುವುದು. 'ಕಾಗೆ ಒಂದುಗಳ ಕಂಡರೆ ಕರೆಯದೆ ತನ್ನ ಬಳಗವನು, ಕೋಳಿ ಒಂದು ಕುಟುಕ ಕಂಡೊಡೆ ಕೂಗಿ ಕರೆಯದೆ ತನ್ನ ಕುಲವೆನ್ನವ?' ಎಂಬ ಬಸವಣ್ಣನವರ ವಚನೋಕ್ತಿ ನೆನಪಿಗೆ ಬರುತ್ತದೆ. ಈ ಮೌಲ್ಯಕ್ಕೆ ಸರಿಹೊಂದುವಂತೆ ಈ ಹಿಂದೆ '(ಷೇರು) ಹೂಡಿಕೆ ಮೇಲೆ ಪರಿಮಿತ ಲಾಭಾಂಶ (ಡಿವಿಡೆಂಡ್)', ಎಂಬ ಸಹಕಾರ ತತ್ವ ಅಡಕವಾಗಿತ್ತು. ಸಂಘದ (ಸದಸ್ಯರ) ಭವಿಷ್ಯದ ಒಳಿತಿಗಾಗಿ ಆಪದ್ಧನ ಸೃಷ್ಟಿ, ಸಂಘದ ವ್ಯಾವಾರವು ಸದಸ್ಯರ ನಡುವೆ ಇರುವಂತಹ ವ್ಯವಹಾರ. ಇದರಿಂದ 'ತಾನು ಎಲ್ಲರಿಗಾಗಿ ಎಲ್ಲರೂ ತನಗಾಗಿ 'ಎಂಬುದು ಸಹಕಾರ ಸಂಘದ ಉದ್ದೇಶ ಮತ್ತು ಎಲ್ಲರೂ ಬಲ್ಲ ನಾಣ್ಣುಡಿ. ಸಿಟಿಜನ್ ಕೋ-ಆಪರೇಟೀವ್ ಬ್ಯಾಂಕ್ v/s ಆಧಾಯ ತೆರಿಗೆ ಇಲಾಖೆಯ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಲಯ ಸ್ವಸಹಾಯ ಮತ್ತು ಪರಸ್ಪರ ಸಹಾಯ ಎಂಬುದು ಸಹಕಾರ ಸಂಘದ ಮೂಲಭೂತ ಅಂಶಗಳಲ್ಲಿ ಒಂದು ಎಂಬುದನ್ನು ಎತ್ತಿ ಹಿಡಿದಿದೆ. ಸದಸ್ಯರು ಸಂಘದ ಆಗು ಹೋಗುಗಳಲ್ಲಿ ಈ ಮೌಲ್ಯವನ್ನು ಪಾಲಿಸಬೇಕು. ಆಡಳಿತ ಮಂಡಳಿಯು ಈ ಮೌಲ್ಯವನ್ನು ಕಾಪಿಡುವಂತೆ ತಮ್ಮ ನಿರ್ಧಾರ, ನಿಲುವು, ನೀತಿಗಳಲ್ಲಿ ಅಳವಡಿಸಿಕೊಳ್ಳಬೇಕು.

**(2) ಸ್ವಯಂ ಜವಾಬ್ದಾರಿ :** ಈ ಮೌಲ್ಯವು ಅತ್ಯಂತ ಸತ್ವಯುತವಾದದ್ದು, ಯಾವುದೇ ಒಂದು ಸಂಸ್ಥೆಯಲ್ಲಿ, ಅಥವ ಒಂದು ಕುಟುಂಬದಲ್ಲೇ ಆಗಲಿ ಅದರ ಅಂಗಗಳು ತಮ್ಮ ಪಾತ್ರ ಮತ್ತು ಜವಾಬ್ದಾರಿಯನ್ನು ಅರಿತು ಅದರಂತೆ ನಡೆದರೆ ಅದಕ್ಕಿಂತ ಹೆಚ್ಚಿನದು ಯಾವುದಿದೇ?

'ಅರಿವಿಗಿಂತ ಮಿಗಿಲುಂಟೆ' ಎಂಬ ವಚನೊಕ್ತಿ ನೆನಪಿಗೆ ಬರುತ್ತದೆ. ಒಂದು ಸಹಕಾರ ಸಂಸ್ಥೆಯಲ್ಲಿ ಸದಸ್ಯರು, ಆಡಳಿತ ಮಂಡಳಿ, ಸಿಬ್ಬಂದಿ ಮೂರು ಅಂಗಗಳು ಭಾಗೀದಾರರು ಇದರೊಡನೆ ಸಂಘದೊಡನೆ ವ್ಯವಹರಿಸುವರು ಸರಬರಾಜುದಾರರು ಇತರರನ್ನು ಭಾಗೀದಾರರೆಂದು ಪರಿಗಣಿಸಬಹುದು. ಈ ಎಲ್ಲ ಭಾಗೀಧಾರರೂ ತಮ್ಮ ತಮ್ಮ ಪಾತ್ರ ಮತ್ತು ಜವಾಬ್ದಾರಿಗಳು (Roles and Responsiblities)ಗಳನ್ನು ತಿಳಿದು (ಅರಿತು) ಅದರಂತೆ ನಡೆದು ಕೊಂಡರೆ 'ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ 'ಎಂಬ ವಚನ ಸಾರ್ಥಕವಾದಂತೆ ಆಗುತ್ತದೆ.

ಸಹಕಾರ ಸಂಘದ ಯಜಮಾನರು ಸಂಘದ ಸದಸ್ಯರು ಅದರ ಗ್ರಾಹಕರು ಕೂಡ ಅವರೇ ಆಗಿರುತ್ತಾರೆ ಎಂಬುದು ಅದರ ವೈಶಿಷ್ಟ್ಯ. ಸದಸ್ಯರು 'ಸಂಘ ತನಗೇನು ಮಾಡಿದೆ ಎಂಬುದಕ್ಕಿಂತ ತಾನು ಸಂಘಕ್ಕೆ ಏನು ಮಾಡಿರುತ್ತೇನೆ ?' ಎಂದು ಪ್ರಶ್ನಿಸಿಕೊಳ್ಳುವುದು ಸೂಕ್ತ. ಸದಸ್ಯ ತನ್ನ ಪಾತ್ರ ಮತ್ತು ಜವಾಬ್ದಾರಿಯನ್ನು ನಿರ್ವಹಿಸುವುದೆಂದರೆ ತಾನು ಸಂಘದ ಚಟುವಟಿಕೆಗಳಲ್ಲಿ, ಆಗು ಹೋಗುಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದೇ ಆಗಿದೆ. ಮೊದಲನೆಯದಾಗಿ ಸದಸ್ಯನಿಗೆ ಇರುವ ಹಕ್ಕು ಮತ್ತು ಅವಕಾಶನೆಂದರೆ ತಾನು ಸಾಮಾನ್ಯ ನಿಕಾಯದ ಭಾಗವಾಗಿ ಸಂಘದ ವಾರ್ಷಿಕ ಮತ್ತು ವಿಶೇಷ ಮಾಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸುವುದು. ವಾರ್ಷಿಕ ವರದಿ, ಲೆಕ್ಕ ಪರಿಶೋಧನ ವರದಿ, ಯೋಜನೆ ವರದಿ, ಆಯ–ವ್ಯಯ, ಅಂತಿಮ ಲೆಕ್ಕಗಳು, ಇವುಗಳ ಅಧ್ಯಯನ, ಸದಸ್ಯರ, ಆಡಳಿತ ಮಂಡಳಿ, ಸಿಬ್ಬಂದಿ ನೀತಿ ನಡವಳಿಕೆಗಳನ್ನು



ರೂಪಿಸುವಲ್ಲಿ ಸಹಕರಿಸುವದು. ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ, ಚಿಕಿತ್ಸಕಾ ಕ್ರಮಗಳನ್ನು ತೆಗೆದುಕೊಳ್ಳುವಲ್ಲಿ ಭಾಗಿಯಾಗುವುದು. ಚುನಾವಣೆಯಲ್ಲಿ ಭಾಗವಹಿಸುವುದು. ಮತದಾನ ಮಾಡುವುದು

ಪ್ರಜ್ಞಾವಂತ, ಜವಾಬ್ದಾರಿಯತ, ಕ್ರಿಯಾಶೀಲ ಆಡಳಿತ ಮಂಡಳಿಯನ್ನು ಆಯ್ಕೆ ಮಾಡುವುದು. ಸಂಘದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದು. ಅದರ ಸೇವೆ ಮತ್ತು ಸೌಲಭ್ಯಗಳನ್ನು ಬಳಸಿಕೊಳ್ಳುವುದು. ಇದರಿಂದ ಸದಸ್ಯರು ತನ್ನ ಜವಾಬ್ದಾರಿಯನ್ನು ನಿರ್ವಹಿಸಿದಂತಾಗುತ್ತದೆ. ಇದರಂತೆ ' ಸಂಘದ ಆರ್ಥಿಕ ಚಟುವಟಿಕೆಯಲ್ಲಿ ಸದಸ್ಯರ ಭಾಗವಹಿಸುವಿಕೆ' ಎಂಬುದನ್ನು ಸಹಕಾರ ತತ್ವವಾಗಿ ಪರಿಗಣಿಸಲಾಗಿದೆ. ಇದರ ಪಾಲನೆಯಾಗದೆ ಸಂಘದ ವ್ಯವಹಾರಗಳನ್ನು ಹಿಗ್ಗಿಸಲಾಗುವುದಿಲ್ಲ. ಸಂಘ ಯಶಸ್ಸು ಗಳಿಸಲಾಗುವುದಿಲ್ಲ. ಸಹಕಾರ ಚಳುವಳಿ ಕುಂಟಿತಗೊಳ್ಳುತ್ತದೆ. ಇದರಿಂದಾಗಿ ಕಾಯ್ದೆ ಭಾಗವಾಗಿ ಮತದಾನ ಹಕ್ಕು ಪಡೆಯ ಬೇಕಾದಲ್ಲಿ ಮಹಾಸಭೆಯಲ್ಲಿ ಭಾಗವಹಿಸುವುದು, ಕನಿಷ್ಟ ಸೇವೆ ಸೌಲಭ್ಯ ಪಡೆಯುವುದನ್ನು ಕಡ್ಡಾಯ ಗೊಳಿಸಲಾಗಿರುತ್ತದೆ. ಎಲ್ಲ ಸದಸ್ಯರು ತಮ್ಮ ಪಾತ್ರ ಮತ್ತು ಜವಾಬ್ದಾರಿಯನ್ನು ಅರಿತು ಅದರಂತೆ ನಡೆದುಕೊಂಡಲ್ಲಿ ಸಹಕಾರ ಸಂಘಗಳು 'ಸದಸ್ಯ ಚಾಲಿತ' (member driven) ಸಹಕಾರ ಸಂಘಗಳು ನಿರ್ಮಾಣವಾಗುವಲ್ಲಿ ಸಂಶಯವಿಲ್ಲ.

ಆಡಳಿತ ಮಂಡಳಿಯು ಸ್ವಯಂ ಆಗಿ ತನ್ನ ಕರ್ತವ್ಯ ಮತ್ತು ಜವಾಬ್ದಾರಿಯನ್ನು ತನ್ನ ಪಾತ್ರ ವನ್ನು ತಾನು ನಿರ್ವಹಿಸಿದಲ್ಲಿ ಸಹಕಾರ ಸಂಘ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿಯೇ ತೀರುತ್ತದೆ. ಸಹಕಾರ

ಸಂಘದ ಚುಕ್ಕಾಣಿ ಇರುವುದೇ ಆಡಳಿತ ಮಂಡಳಿಯಲ್ಲಿ. ಆಡಳಿತ ಮಂಡಳಿಯು ತಾನು ಸದಸ್ಯರಿಗೆ, ತನ್ನನ್ನು ಆರಿಸಿ ಆಡಳಿತದ ಜವಾಬ್ದಾರಿಯನ್ನು ವಹಿಸಿರುವ ಸದಸ್ಯರಿಗೆ ಹೊಣೆಗಾರ ಎಂಬುದನ್ನು ಅರಿತು ನಡೆಯುವುದು ಬಹು ಮುಖ್ಯ. ತನ್ನ ಆಡಳಿತಾವಧಿಯಲ್ಲಿ ಮಾಡಿದ ಸಾಧನೆಗಳೇನು? ಸದಸ್ಯರ ಆಶಯ, ಆಕಾಂಕ್ಷೆ, ಅವಶ್ಯಕತೆಗಳ ಪೂರೈಕೆಗಾಗಿ ತಾನು ತೆಗೆದುಕೊಂಡ ಕ್ರಮಗಳೇನು? ಎಂಬ ಆತ್ಮವಿಮರ್ಶೆ ಅತ್ಯಗತ್ಯ. ಆಡಳಿತ ಮಂಡಳಿ ಸಭೆಗೆ ಹಾಜರಾಗುತ್ತಿದ್ದೇನೆಯೇ? ಸಭೆಗೆ ಪೂರ್ವ ತಯಾರಿಯೊಡನೆ ಹಾಜರಾಗಿ ನಿರ್ಧಾರ ತೆಗೆದುಕೊಳ್ಳುವಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದೆನೆಯೇ? ಸಂಘದ ಕಾರ್ಯಾಚರಣೆ ಲಾಭದಾಯಕವಾಗಿ ನಡೆಯುತ್ತಿದೆಯೇ? ಲೆಕ್ಕ ಪತ್ರಗಳು ಸರಿಯಾಗಿ ನಿರ್ವಹಣೆಯಾಗುತ್ತಿದೆಯೇ? ಅಂತಿಮ ಲೆಕ್ಕಗಳ ಫಲಿತಾಂಶಗಳೇನು? ಸಂಘದ ನಿಧಿಗಳ ನಿರ್ವಹಣೆ ಯಾವ ರೀತಿ ಆಗುತ್ತಿದೆ? ಆಸ್ತಿ– ಜವಾಬ್ದಾರಿ ನಿರ್ವಹಣೆ ಹೇಗೆ ನಡೆಯುತ್ತಿದೆ? ಇದರ ಬಗ್ಗೆ ಹಿಮ್ಮಾಹಿತಿ (feed back) (MIS - Monitoring information system) ಪಡೆಯಲಾಗುತ್ತಿದ್ದೆಯೆ?. ಇದರ ಪರಿಶೀಲನೆ ಯಾಗುತ್ತಿದೆಯೇ?

ತಪ್ಪು ಒಪ್ಪುಗಳು ಕಂಡು ಬರುತ್ತಿದ್ದಾವೆಯೇ? ಸೂಕ್ತ ಸರಿಪಡಿಸುವ, ಚಿಕಿತ್ಸಾ ಕ್ರಮಗಳೇನು? ಎಂಬೆಲ್ಲ ಪ್ರಶ್ನೆಗಳಿಗೆ ಉತ್ತರ ಕಂಡು ಹಿಡಿಯುವ ಜವಾಬ್ದಾರಿ ಆಡಳಿತ ಮಂಡಳಿ ಯದ್ದಾಗಿರುತ್ತದೆ. ಆಡಳಿತ ಮಂಡಳಿಯು ತನ್ನ ನಿರ್ಧಾರಗಳಲ್ಲಿ ಯಾವುದೇ ಹಿತಾಸಕ್ತಿ ಸಂಘರ್ಷಕ್ಕೆ ಎಡೆ ಮಾಡಿಕೊಡದೆ ಪಾರದರ್ಶಕತೆಯಿಂದ ವರ್ತಿಸಿದ್ದಲ್ಲಿ, ತನ್ನ ತೀರ್ಮಾನಗಳು ಎಲ್ಲರನ್ನು ಒಳಗೊಂಡು, ಸಕಲರ ಪಾಲ್ಗೊಳ್ಳುವಿಕೆಯಿಂದ ತೆಗೆದುಕೊಂಡ ತಿರ್ಮಾನವೇ ಆದರೆ ಅದರ ಅನುಷ್ಠಾನವು ಸುಲಭವಾಗುತ್ತದೆ ಮತ್ತು ಯಶಸ್ವಿಯಾಗುತ್ತದೆ. ತೀರ್ಮಾನವು ಮುಂದಾಲೋಚನೆ, ದೂರದಶ್ರಿತ್ವದಿಂದ ಕೂಡಿರಬೇಕು. ಅದರ ಆಗು ಹೋಗುಗಳ (pros-cons) ಬಗ್ಗೆ ಅರಿವಿರಬೇಕು. ಮಿಗಿಲಾಗಿ ತಾವು ಸದಸ್ಯರಿಗೆ (ಮಹಾಸಭೆಗೆ) ಹೊಣೆಗಾರರು ಎಂಬುದನ್ನು ಮರೆಯಲಾಗದು. ಇಂತಹ ಪ್ರಜ್ಞಾವಂತ, ಪ್ರಭುದ್ಧ ಆಡಳಿತ ಮಂಡಳಿ ಅಸ್ತಿತ್ವದಲ್ಲಿದ್ದಲ್ಲಿ ಸಹಕಾರ ಸಂಘ, ಒಟ್ಟಾರೆ ಸಹಕಾರ

ಚಳುವಳಿ ಯಶಸ್ವಿಯಾಗುವಲ್ಲಿ ಯಾವುದೇ ಸಂಶಯ ವಿರುವದಿಲ್ಲ.

ಮತ್ತೊಂದು ಪ್ರಮುಖ ಅಂಗ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳನ್ನು ಒಳಗೊಂಡಂತೆ ಸಿಬ್ಬಂದಿ ವರ್ಗ. ಸಹಕಾರ ಸಂಘದಲ್ಲಿ ಪ್ರತಿಯೊಬ್ಬ ನೌಕರನು/ಳು ಅತ್ಯಂತ ಪ್ರಮುಖ ವ್ಯಕ್ತಿ. ಅದರಲ್ಲಿ ಮೇಲು ಕೆಳಗೆ ಎಂಬ ಪ್ರಶ್ನೆಯಿಲ್ಲ. ಯಾರೂ ಅಮುಖ್ಯರಲ್ಲ. ಆಡಳಿತದ ದೃಷ್ಟಿಯಿಂದ, ಒಂದು ನಿಯಂತ್ರಣ ವ್ಯವಸ್ಥೆಗಾಗಿ ಸಿಬ್ಬಂದಿ ಶ್ರೇಣಿ ನಿರ್ಮಾಣವಾಗುತ್ತಿರುತ್ತದೆ ವಿನಃ ಬೇರೆ ಅಥವ ಅನ್ಯತಾ ಉದ್ದೇಶವಿರುವುದಿಲ್ಲ. ಪ್ರತಿಯೊಬ್ಬ ನೌಕರರು ತಮ್ಮ ತಮ್ಮ ಜವಾಬ್ದಾರಿಗಳನ್ನು ವಹಿಸಿದ ಕರ್ತವ್ಯಗಳನ್ನು ಶಿಸ್ತುಬದ್ಧವಾಗಿ, ಸಕಾಲದಲ್ಲಿ ನಿರ್ವಹಣೆ ಮಾಡಿದಲ್ಲಿ ಅದಕ್ಕಿಂತ ಮಿಗಿಲಾದ ದೇನಿದೆ. ಸಂಘದ ಕಾರ್ಯಾಚರಣೆ ಸುಸೂತ್ರವಾಗಿ ತಾನೇ ತಾನಾಗಿ ನಡೆಯುತ್ತದೆ. ಸಹಕಾರ ಸಂಘದ ಯಶಸ್ಸು ತನ್ನ ಕರ್ತವ್ಯ ಮತ್ತು ಜವಾಬ್ದಾರಿಯನ್ನು ಅರಿತ ಸಿಬ್ಬಂದಿಯನ್ನು ಅವಲಂಭಿಸಿರುತ್ತದೆ. ಜ್ಞಾನವುಳ್ಳ, ಕೆಲಸದಲ್ಲಿ ನುರಿತ ಸಿಬ್ಬಂದಿಯಾಗಿದ್ದು, ಸಂಘದ ಸದಸ್ಯರ ಆಶಯ, ಆಕಾಂಕ್ಷೆ, ಅವಶ್ಯಕತೆ ಈಡೇರಿಸಬೇಕೆಂಬ ಗುಣಾತ್ಮಕ ಮನೋಚಿಂತನೆ ಉಳ್ಳವರಾಗಿದ್ದರೆ, ಅವರು ಆಡಳಿತ ಮಂಡಳಿಗೂ ದಿಕ್ಸೂಚಿಯಾಗಿ ವರ್ತಿಸಿ ಸಹಕಾರ ಸಂಘವನ್ನು ಯಶಸ್ವಿಗೊಳಿಸಬಲ್ಲರು ಎಂಬುದು ಸರ್ವಕಾಲಿಕ ಸತ್ಯ. ಇನ್ನು ಸಂಘದ ಸರಬರಾಜುದಾರರು, ಇನ್ನಿತರ ಸೇವೆ ಸೌಕರ್ಯಗಳನ್ನು ಸಂಘಕ್ಕೆ ಒದಗಿಸುವವರೂ ಸಂಘವು ವಹಿಸಿರುವ ಜವಾಬ್ದಾರಿಯನ್ನು ತಾವು ನಿರ್ವಹಿಸಿದರೆ ಸಂಘದ ಕೆಲಸ ಕಾರ್ಯಗಳು ಸುಲಲಿತವಾಗಿ ನೆರವೇರುತ್ತವೆ. ಸಹಕಾರ ಸಂಘವು ಒಂದು ಯಶಸ್ವಿ ಸಹಕಾರ ಸಂಘ ಎಂದೆನಿಸಿಕೊಳ್ಳುತ್ತದೆ.

**(3) ಪ್ರಜಾಪ್ರಭುತ್ವ :** ಸಹಕಾರ ಸಂಘಗಳು ಪ್ರಜಾಸತ್ತಾತ್ಮಕ ನಿಯಂತ್ರಣವುಳ್ಳ ಸಂಸ್ಥೆಗಳು. ಪ್ರಜ್ಞಾವಂತ ಜವಾಬ್ದಾರಿಯುತ ಆಡಳಿತ ಮಂಡಳಿಯನ್ನು ಆಯ್ಕೆ ಮಾಡುವುದು ಪ್ರಜ್ಞಾವಂತ ಸದಸ್ಯರ ಜವಾಬ್ದಾರಿಯಾಗಿರುತ್ತದೆ. ಅತ್ಯುತ್ತಮ ನಾಯಕತ್ವ ಗುಣಗಳ ಬೆಳವಣಿಗೆಗೆ ಸಹಕಾರ ಸಂಸ್ಥೆಗಳು ಅವಕಾಶ ಒದಗಿಸುತ್ತವೆ. ಈ ಸಂಸ್ಥೆಗಳಲ್ಲಿ ಕೇವಲ ಪ್ರಜಾಸತ್ತಾತ್ಮಕ ಆಡಳಿತ ವ್ಯವಸ್ಥೆಯಲ್ಲದೇ ಸಂಸ್ಥೆಗಳು ಔದ್ಯೋಗಿಕ ಸಂಸ್ಥೆಗಳಾಗಿರುವುದರಿಂದ ವ್ಯವಹಾರಿಕ ಅಂಶಗಳು ಮೇಳೈಸಿರುವುದರಿಂದ ವ್ಯವಹಾರಿಕ ಜ್ಞಾನ, ಕೌಶಲ್ಯಗಳ ಕಲಿಕೆಗೆ ಸದಾವಕಾಶ ದೊರೆಯುತ್ತದೆ. ಪ್ರಜಾಪ್ರಭುತ್ವ ಮತ್ತು ನಾಯಕತ್ವ ಎರೆಡೂ ಅವಿಭಾಜ್ಯ ಶ್ರೇಷ್ಠ ನಾಯಕತ್ವವಿಲ್ಲದೇ ಪ್ರಜಾಪ್ರಭುತ್ವ ಬೆಳೆಯಲಾರದು ಅದರಂತೆ ಪ್ರಜಾಪ್ರಭುತ್ವ ಆಧರಿತ ಸಹಕಾರ ಸಂಸ್ಥೆಗಳು. 'ತಥಾ ರಾಜಾ ತಥಾ ಪ್ರಜಾ 'ಅಲ್ಲ ಪ್ರಜಾಪ್ರಭುತ್ವದಲ್ಲಿ 'ತಥಾ ಪ್ರಜಾ ತಥಾ ರಾಜ 'ಎಂಬುದನ್ನು ಒಪ್ಪಿಕೊಳ್ಳಬೇಕು. ಪ್ರಜಾ ಪ್ರಭುತ್ವದಲ್ಲಿ ಪ್ರಜೆಗಳು ಹೇಗೆ ಮುಖ್ಯವೋ ಹಾಗೆ ಸಹಕಾರ ಸಂಘಗಳಲ್ಲಿ ಸದಸ್ಯರು ಮುಖ್ಯರು, ಅವರೇ 'ಸದಸ್ಯ ಚಾಲಿತ ಸಹಕಾರ ಸಂಘ'ವನ್ನು ರೂಪಿಸ ಬಲ್ಲರು.

**(4) ಸಮಾನತೆ, ಬಂಡವಾಳ, ಒಗ್ಗಟ್ಟು :** ಈ ಸಹಕಾರ ಮೌಲ್ಯಗಳ ಪಾಲನೆ ಸಹಕಾರ ಸಂಘಗಳ ಸರ್ವೊತ ಮುಖ ಅಭಿವೃದ್ಧಿಗೆ ಕಾರಣವಾಗುತ್ತದೆ. ಸಹಕಾರ ಸಂಘದಲ್ಲಿ ಸದಸ್ಯರಲ್ಲರೂ ಸಮಾನರು.

ಕೆಲವರು ಹೆಚ್ಚು ಸಮಾನರು ಕೆಲವರು ಕಡಿಮೆ ಸಮಾನರು ಎಂಬ ಪ್ರಶ್ನೆ ಉದ್ಭವಿಸಬಾರದು. ಸಹಕಾರ ಸಂಘಕ್ಕೆ ಸದಸ್ಯರಾದ ನಂತರ ಸಹಕಾರ ಸಂಘದಲ್ಲಿ ಅವರೆಲ್ಲರೂ ಸಮಾನರು, ಒಬ್ಬ ಸದಸ್ಯ

ಎಷ್ಟೇ ಷೇರು ಹೊಂದಿದ್ದರೂ ಅವರಿಗೆ ಇರುವುದು ಒಂದೇ ಮತ. ಸಮಾನತೆ, ಸಮಾನ ಮನಸ್ಕರು, ಸಮಾನ ಚಿಂತನೆ ಅತಿ ಅವಶ್ಯ. ಭಿನ್ನಮತ ಸರ್ವೇ ಸಾಮಾನ್ಯ ಆದರೆ ಚಿಂತನ ಮಂಥನ ನಡೆದು ಸದಸ್ಯರ ಒಳಿತಿಗಾಗಿ ಅತ್ಯುತ್ತಮ ತೀರ್ಮಾನ ತೆಗೆದುಕೊಳ್ಳಬೇಕು. ಎಲ್ಲರೂ ಸಮಾನರು ಎನ್ನುವ ಮನೋಭಾವನೆ, ಚಿಂತನೆ, ಸಹಕಾರ ಸಂಘದ ಯಶಸ್ವಿ ಕಾರ್ಯಾಚರಣೆ ದೃಷ್ಟಿಯಿಂದ ಅತಿ ಅವಶ್ಯ.

ಬಂಡವಾಳವಿಲ್ಲದೇ ಯಾವುದೇ ವ್ಯವಹಾರ ಮಾಡಲಾಗುವುದಿಲ್ಲ. ಬಂಡವಾಳವಿಲ್ಲದಿದ್ದಲ್ಲಿ 'ಬಂಡವಾಳವಿಲ್ಲದ ಬಡಾಯಿ' ಟಿ.ಪಿ. ಕೈಲಾಸಂ ರವರ ನಾಟಕದತಾಗುತ್ತದೆ. ಅದರಲ್ಲಿಯೂ ಸಹಕರ ಸಂಘದಲ್ಲಿನ ಬಂಡವಾಳ ಒಂದು ರೀತಿ ಮೌಲ್ಯವರ್ಧಿತ ಬಂಡವಾಳ (equity) ಅದರಲ್ಲಿ ಪ್ರೀತಿ, ಪ್ರೇಮ, ನಮ್ಮ ಸಂಘ ನಮ್ಮದು ಮುಖಭಾವ, ಶ್ರಮ, ಕಷ್ಟಪಟ್ಟು ಗಳಿಸಿದ ಗಳಿಕೆ ಅಂಶಗಳು ಮೇಳೈಸಿದೆ. ಹಾಗಾಗಿ ಇದರ ಮಹತ್ವ ಅತಿ ಹೆಚ್ಚಿನದು. ಬಂಡವಾಳ ಕ್ರೋಡೀಕರಣ, ಬಂಡವಾಳಕ್ಕೆ ಬಂಡವಾಳದ ಸೇರ್ಪಡೆ, ಉಳಿಕೆ, ಅದರ ವಿವೇಚನಯುತ ವ್ಯವಹಾರ ಹೂಡಿಕೆ ಬಹುಮುಖ್ಯ ವಿಚಾರವಾಗುತ್ತದೆ.

ಒಗ್ಗಟ್ಟು (solidarity) ಯಾವುದೇ ಸಂಘಟನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಅದರಂತೆ ಸಹಕಾರ ಸಂಘದಲ್ಲಿಯೂ ಕೂಡ. ಪಟ್ಟಭದ್ರ ಹಿತಾಸಕ್ತಿಗಳು, ಸಂಘಟನೆಯನ್ನು ಒಡೆಯಲು ಸದಾ ಹವಣಿಸುತ್ತಿರುತ್ತವೆ. ಸಹಕಾರ ಸಂಘವು ಈ ವಿಷಯಗಳಲ್ಲಿ ಅತಿ ಎಚ್ಚರಿಕೆ ಇಂದ ಇರತಕ್ಕದ್ದು. ಅನೇಕ ವೇಳೆ ಬಾಹ್ಯದಿಂದ ಅಲ್ಲದೇ ಆಂತರಿಕವಾಗಿ ನುಸುಳಿ ಯಶಸ್ವಿ ಕಾರ್ಯಾಚರಣೆಗೆ ಧಕ್ಕೆ ತರುವ, ಹಾಳುಗೆಡಹುವ ಕೆಲಸ ಮಾಡುತ್ತವೆ. ಇಂತಹ ದುಷ್ಟ ಶಕ್ತಿಗಳ ವಿರುದ್ಧ ಸಹಕಾರ ಸಂಘದ ಭಾಗೀಧಾರರೆಲ್ಲರೂ ಒಗ್ಗೂಡಿ ಕಾರ್ಯವೆಸುಗುವ ಶಕ್ತಿಯನ್ನು ಹೊಂದಿರ ಬೇಕು. 'ಒಗ್ಗಟ್ಟಿನಲ್ಲಿ ಬಲವಿದೆ' ಎಂಬುದನ್ನು ಅರಿತು ಸಾಬೀತು ಪಡೆಸಬೇಕು.

ಅಂತರರಾಷ್ಟ್ರೀಯ ಮೈತ್ರಿ ಸಂಸ್ಥೆಯು ವಿಶ್ವಾದ್ಯಂತ ಸಹಕಾರ ಸಂಘಗಳನ್ನು ಅಧ್ಯಯನ ಮಾಡಿ ಈ ಮೇಲಿನ ಸಹಕಾರ ಮೌಲ್ಯಗಳನ್ನು ರೂಪಿಸಿದೆ. ಇವುಗಳ ಅಳವಡಿಕೆಯಿಂದ ಸಹಕಾರಿಗಳು ಯಶಸ್ವಿ ಸಹಕಾರ ಸಂಘಗಳನ್ನು ಕಟ್ಟಿ 'ಉಳಿಸಿ ಬೆಳೆಸುತ್ತಾರೆ ಎಂಬುದು ಸದಾಶಯವೇ ಸರಿ.

'ಇವನಾರವ, ಇವನಾರವ, ಇವನಾರವನೆಸದಿರಯ್ಯಾ
ಇವ ನಮ್ಮವ, ಇವನಮ್ಮವ, ಇವ ನಮ್ಮವನೆಂದಿನಿಸಯ್ಯಾ'
ಕೂಡಲ ಸಂಗಮದೇವಾ, ನಿಮ್ಮ ಮನೆಯ ಮಗನೆಂದೆನಿಸಯ್ಯಾ'

– ಬಸವಣ್ಣ

ಸಹಕಾರಂ ಗೆಲ್ಗೆ, ಸಹಕಾರಂ ಬಾಳ್ಗೆ